ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ಮತ್ತು ವಿಜ್ಞಾನಗಳ ಸಂಸ್ಥೆ, ಹಾಸನ.

# HASSAN INSTITUTE OF MEDICAL SCIENCES, HASSAN

**(An Autonomous Institute under the Dept of Medical Education, Government of Karnataka)**

**SRI CHAMARAJENDRA HOSPITAL CAMPUS, HASSAN**

Website: www.hims-hassan.org Phone/Fax No.08172-231699, 231599, Email:directorhims@yahoo.com

# 18ನೇ ಆರ್ಥಿಕ ಸಮಿತಿ ಸಭೆ

**ದಿನಾಂಕ: 28–11–2017ರಂದು ಮಂಗಳವಾರ ಸಂಜೆ:4.00 ಗಂಟೆಗೆ**

**ಸ್ಥಳ: ವೈದ್ಯಕೀಯ ಶಿಕ್ಷಣ ಇಲಾಖೆ,**

**ಕೊಠಡಿ ಸಂಖ್ಯೆ: 601, 6ನೇ ಮಹಡಿ, 4ನೇ ಹಂತ,**

**ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವಿಧಿ, ಬೆಂಗಳೂರು.**

ಕರ್ನಾಟಕ ಸರ್ಕಾರ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

HASSAN INSTITUTE OF MEDICAL SCIENCES, HASSAN

(An Autonomous Institute under the Dept of Medical Education, Government of Karnataka)

SRI CHAMARAJENDRA HOSPITAL CAMPUS, HASSAN-573201

Website: www.hims-hassan.org Phone/Fax No.08172-231699 Email:directorhims@yahoo.com

# 18ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳು

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 18ನೇ ಆರ್ಥಿಕ ಸಮಿತಿ ಸಭೆಯು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ ಸಭೆ, ಹಿಮ್ಸ್ ಹಾಸನ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:28-11-2017ರಂದು ಮಂಗಳವಾರ ಮಧ್ಯಾಹ್ನ:4.00ಗಂಟೆಗೆ ಕೊಠಡಿ ಸಂಖ್ಯೆ:601, 6ನೇ ಮಹಡಿ, 4ನೇ ಹಂತ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವಿಧಿ, ಬೆಂಗಳೂರು ಇಲ್ಲಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಒಟ್ಟು ಸದಸ್ಯರ ಸಂಖ್ಯೆ:10** **ಹಾಜರಿದ್ದ ಸದಸ್ಯರ ಸಂಖ್ಯೆ:10**

| | | | |
|---|---|---|---|
| 1 | ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, 4ನೇ ಹಂತ, ಬೆಂಗಳೂರು. | ಅಧ್ಯಕ್ಷರು | ಹಾಜರಿರುತ್ತಾರೆ |
| 2 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 3 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 4 | ಮಾನ್ಯ ಸರ್ಕಾರದ ಉಪಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, 4ನೇ ಹಂತ, ಬೆಂಗಳೂರು | ಸದಸ್ಯರು | ಹಾಜರಿರುತ್ತಾರೆ |
| 5 | ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು | ಸದಸ್ಯರು | ಹಾಜರಿರುತ್ತಾರೆ |
| 6 | ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 7 | ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 8 | ಪ್ರಾಂಶುಪಾಲರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 9 | ವೈದ್ಯಕೀಯ ಅಧೀಕ್ಷಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 10 | ಆರ್ಥಿಕ ಅಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿರುತ್ತಾರೆ |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 1 | ದಿನಾಂಕ:24–06–2017 ರಂದು ನಡೆದ 17ನೇ ಆರ್ಥಿಕ ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಓದಿ ಅಂಗೀಕರಿಸುವುದರ ಬಗ್ಗೆ. | ದಿನಾಂಕ:24–06–2017ರಂದು ನಡೆದ 17ನೇ ಆರ್ಥಿಕ ಸಮಿತಿ ಸಭೆಯಲ್ಲಿ 11 ವಿಷಯಗಳ ಬಗ್ಗೆ ಚರ್ಚಿಸಿ ತೆಗೆದುಕೊಂಡಿದ್ದ ತೀರ್ಮಾನಗಳನ್ನು ದಿನಾಂಕ:31–8–2017ರಂದು ನಡೆದ ಸಂಸ್ಥೆಯ 30ನೇ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ನಂತರ ಸಂಸ್ಥೆಯಿಂದ ತೆಗೆದುಕೊಂಡ ಕ್ರಮಗಳ ಅನುಪಾಲನಾ ವರದಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. ಸದರಿ ಸಭೆಯ ಅನುಪಾಲನಾ ವರದಿಯನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 2 | 2018–19ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಇತರೆ ಸಂಸ್ಥೆಗಳಿಗೆ ಭದ್ರತಾ ಮತ್ತು ಇತರೆ ಸೇವೆಗಳನ್ನು ಹೊರಸಂಪನ್ಮೂಲ ಏಜೆನ್ಸಿಯಿಂದ ಪಡೆಯಲು ಒಂದು ವರ್ಷದ ಅವಧಿಗೆ ಇ–ಟೆಂಡರ್ ಕರೆಯುವ ಬಗ್ಗೆ. | ಸಂಸ್ಥೆಯ ವೈದ್ಯಕೀಯ ಕಾಲೇಜು, ಹೊಸ ಮತ್ತು ಹಳೆಯ ಬೋಧಕ ಆಸ್ಪತ್ರೆ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ, ಹಾಸನ ಮತ್ತು ಹೊಳೆನರಸೀಪುರ ಈ ಸಂಸ್ಥೆಗಳಿಗೆ ಭದ್ರತಾ ಮತ್ತು ಇತರೆ ಸೇವೆಗಳಿಗೆ ಹೊರಸಂಪನ್ಮೂಲ ಏಜೆನ್ಸಿಯಿಂದ ಪಡೆಯಲಾಗಿದ್ದ ಇ–ಟೆಂಡರ್ ಅವಧಿಯು ದಿನಾಂಕ:31–04–2018 ಕ್ಕೆ ಮುಕ್ತಾಯಗೊಳ್ಳುವುದರಿಂದ 2018–19ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಇತರೆ ಸಂಸ್ಥೆಗಳಿಗೆ ಭದ್ರತಾ ಮತ್ತು ಇತರೆ ಸೇವೆಗಳನ್ನು ಒಂದು ವರ್ಷದ ಅವಧಿಗೆ ಇ–ಟೆಂಡರ್ ಮೂಲಕ ಪಡೆಯುವ ಕೆಳಕಂಡ ಪ್ರಸ್ತಾವನೆಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು. |

| ಎ | ಕ್ರಮ ಸಂಖ್ಯೆ | ಹುದ್ದೆಗಳ ವಿವರ | ಕಾರ್ಮಿಕರ ಸಂಖ್ಯೆ | ಒಟ್ಟು ಕಾರ್ಮಿಕರ ಸಂಖ್ಯೆ | ವಾರ್ಷಿಕ ವೆಚ್ಚ |
|---|---|---|---|---|---|
| | 1 | ಸೆಕ್ಯೂರಿಟಿ ಸೂಪರ್ ವೈಸರ್ | 04 | 145 | 3,06,35,910–00 |
| | 2 | ಸೆಕ್ಯೂರಿಟಿ ಗಾರ್ಡ್ಸ್ | 82 | | |
| | 3 | ಅಂಬುಲೆನ್ಸ್ ವಾಹನ ಚಾಲಕರು | 05 | | |
| | 4 | ಕಛೇರಿ ವಾಹನ ಚಾಲಕರು | 02 | | |
| | 5 | ಗಾರ್ಡನರ್ | 06 | | |
| | 6 | ಲಿಫ್ಟ್ ಆಪರೇಟರ್ | 08 | | |
| | 7 | ಫಾರ್ಮಸಿಸ್ಟ್ | 04 | | |
| | 8 | ಡೇಟಾ ಎಂಟ್ರಿ ಆಪರೇಟರ್ಸ್ | 20 | | |
| | 9 | ಇ.ಇ.ಜಿ. ತಂತ್ರಜ್ಞರು | 1 | | |
| | 10 | ಕ್ಷ–ಕಿರಣ ತಂತ್ರಜ್ಞರು | 4 | | |
| | 11 | ಕ್ಷೌರಿಕ (ಬಾರ್ಬರ್) | 1 | | |



ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|

| | | | | | |
|---|---|---|---|---|---|
| | 12 | ಅಡುಗೆ ಸಹಾಯಕರು | 08 | | |
| ಬಿ | 01 | ಗ್ರೂಪ್ ಡಿ | 146 | 146 | 2,74,58,800–00 |
| ಒಟ್ಟು | | | | **291** | **5,80,94,710.00** |

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ 2018–19ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಇತರೆ ಸಂಸ್ಥೆಗಳಿಗೆ ಭದ್ರತಾ ಮತ್ತು ಇತರೆ ಸೇವೆಗಳಿಗೆ ಹೊರಸಂಪನ್ಮೂಲ ಏಜೆನ್ಸಿಯಿಂದ ಪಡೆಯುವ ಒಟ್ಟು 291 ವಿವಿಧ ಸೇವೆಗಳ ಪೈಕಿ ಕಾರ್ಮಿಕರ ಸಂಖ್ಯೆಗೆ ಅನುಗುಣವಾಗಿ ಭದ್ರತಾ ಮತ್ತು ಇತರೆ ಸೇವೆಗಳಿಗೆ 145 ಕಾರ್ಮಿಕರು ಹಾಗೂ ಅಂದಾಜು ವೆಚ್ಚ ರೂ.3,06,35,910.00 ಮತ್ತು ಗ್ರೂಪ್ 'ಡಿ' 146 ಕಾರ್ಮಿಕರು ಹಾಗೂ ಅಂದಾಜು ವೆಚ್ಚ ರೂ.2,74,58,800.00 ಎರಡು ಪ್ರತ್ಯೇಕ ಟೆಂಡರ್‌ಗಳನ್ನಾಗಿ ಕೆ.ಟಿ.ಟಿ.ಪಿ ನಿಯಮ 1999–2000ರ ಪ್ರಕಾರ ಇ–ಟೆಂಡರ್ ಕರೆಯುವುದೆಂದು ತೀರ್ಮಾನಿಸಿ ಸದರಿ ವೆಚ್ಚವನ್ನು ಲೆಕ್ಕಶೀರ್ಷಿಕೆ 2210–05–105–1–49–103 ಸಾಮಾನ್ಯ ವೆಚ್ಚದಡಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**3** — 2018–19ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಇತರೆ ಸಂಸ್ಥೆಗಳಿಗೆ ಸ್ವಚ್ಛತಾ ಸೇವೆಗಳನ್ನು ವಿಸ್ತೀರ್ಣಕ್ಕೆ ಅನುಗುಣವಾಗಿ ಹೊರಸಂಪನ್ಮೂಲ ಏಜೆನ್ಸಿಯಿಂದ ಪಡೆಯಲು ಒಂದು ವರ್ಷದ ಅವಧಿಗೆ ಇ–ಟೆಂಡರ್ ಕರೆಯುವ ಬಗ್ಗೆ.

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಹೊಸ ಬೋಧಕ ಆಸ್ಪತ್ರೆ, ಹಳೆ ಆಸ್ಪತ್ರೆ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಹಾಸನ ಮತ್ತು ಹೊಳೆನರಸೀಪುರ ಈ ಕಟ್ಟಡಗಳ ಸ್ವಚ್ಛತಾ ನಿರ್ವಹಣೆಗಾಗಿ ಸ್ವಚ್ಛತಾ ಪದಾರ್ಥಗಳು, ಎಲೆಕ್ಟ್ರಿಕಲ್ ಸಾಮಗ್ರಿಗಳು, ಪ್ಲಂಬಿಂಗ್ ಸಾಮಾಗ್ರಿಗಳು ಹಾಗೂ ಅವಶ್ಯಕ ಸ್ವಚ್ಛತಾ ಸಿಬ್ಬಂದಿಗಳ ಸಂಖ್ಯೆ ಸೇರಿಸಿ ಚದುರ ಮೀಟರ್‌ಗಳಿಗೆ ದರ ನಿಗದಿಪಡಿಸಿ ಹೊರಸಂಪನ್ಮೂಲ ಏಜೆನ್ಸಿಯಿಂದ ಪಡೆಯಲಾಗಿದ್ದ ಇ–ಟೆಂಡರ್ ಅವಧಿಯು ದಿನಾಂಕ:31–04–2018ಕ್ಕೆ ಮುಕ್ತಾಯಗೊಳ್ಳುವುದರಿಂದ 2018–19ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಎಲ್ಲಾ ಸಂಸ್ಥೆಗಳ ಕಟ್ಟಡಗಳ ಸ್ವಚ್ಛತಾ ನಿರ್ವಹಣೆಗೆ ಹೊರಸಂಪನ್ಮೂಲ ಏಜೆನ್ಸಿಯಿಂದ ಇ–ಟೆಂಡರ್ ಕರೆಯುವ ಪ್ರಸ್ತಾವನೆಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.

| ಕ್ರಸಂ | ಹುದ್ದೆಗಳ ವಿವರ | ಕಾರ್ಮಿಕರ ಸಂಖ್ಯೆ | ಒಟ್ಟು ಕಾರ್ಮಿಕರ ಸಂಖ್ಯೆ | ವಾರ್ಷಿಕ ವೆಚ್ಚ |
|---|---|---|---|---|
| 1 | ಸ್ವಚ್ಛತಾ ಸಿಬ್ಬಂದಿ (ಸ್ಕ್ಯಾವೆಂಜರ್ಸ್ ಮತ್ತು ರಿಲಿವರ್ಸ್ ಸೇರಿ) | 110 | 125 | 3,52,15,180.00 |
| 2 | ಸ್ವಚ್ಛತಾ ಸೂಪರ್ ವೈಸರ್ಸ್ | 03 | | |
| 3 | ಎಲೆಕ್ಟ್ರಿಷಿಯನ್ | 06 | | |
| 4 | ಪ್ಲಂಬರ್ | 05 | | |



ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

<table>
<tr><th>ಅಜೆಂಡಾ ಕ್ರಮ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td>
<table>
<tr><td>5</td><td>ಮರಗೆಲಸಗಾರರು</td><td>01</td><td></td><td></td></tr>
<tr><td colspan="3">ಒಟ್ಟು</td><td>125</td><td>3,52,15,180.00</td></tr>
</table>
ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, 2018–19ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಎಲ್ಲಾ ಕಟ್ಟಡಗಳ ಸ್ವಚ್ಛತಾ ನಿರ್ವಹಣೆಗೆ ಅವಶ್ಯಕವಿರುವ ಸ್ವಚ್ಛತಾ ಪದಾರ್ಥಗಳು, ಎಲೆಕ್ಟ್ರಿಕಲ್ ಸಾಮಗ್ರಿಗಳು, ಪ್ಲಂಬಿಂಗ್ ಸಾಮಾಗ್ರಿಗಳು ಹಾಗೂ ಅವಶ್ಯಕ 125 ಸ್ವಚ್ಛತಾ ಸಿಬ್ಬಂದಿಗಳ ಸಂಖ್ಯೆ ಒಟ್ಟು ಸೇರಿಸಿ ಕಟ್ಟಡಗಳ ವಿಸ್ತೀರ್ಣಕ್ಕೆ ಅನುಗುಣವಾಗಿ ಚದುರ ಮೀಟರ್‌ಗಳಿಗೆ ದರ ನಿಗದಿಪಡಿಸಿ ಕೆ.ಟಿ.ಟಿ.ಪಿ ನಿಯಮ 1999–2000ರ ಪ್ರಕಾರ ಇ–ಟೆಂಡರ್ ಕರೆಯುವುದೆಂದು ಮತ್ತು ಸದರಿ ಕಟ್ಟಡಗಳ ನಿರ್ವಹಣೆಯ ವಾರ್ಷಿಕ ವೆಚ್ಚ ರೂ3,52,15,180.00ಗಳನ್ನು ಲೆಕ್ಕ ಶೀರ್ಷಿಕೆ 2210–05–105–1–49–103 ಸಾಮಾನ್ಯ ವೆಚ್ಚದಡಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.</td></tr>
<tr><td>4</td><td>2018ನೇ ಸಾಲಿಗೆ ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ಅವಶ್ಯಕತೆ ಇರುವ ನಿಯತಕಾಲಿಕೆಗಳ ಸರಬರಾಜಿಗೆ ಇ–ಟೆಂಡರ್ ಕರೆಯುವ ಬಗ್ಗೆ.</td><td>ಸಂಸ್ಥೆಯ ಕೇಂದ್ರ ಗ್ರಂಥಾಲಯ ವಿಭಾಗಕ್ಕೆ Medical council of India, New Delhi regulations 1999 ಪ್ರಕಾರ ಪ್ರತಿ ವರ್ಷ ಕಡ್ಡಾಯವಾಗಿ ನಿಯತಕಾಲಿಕೆಗಳನ್ನು ಖರೀದಿಸಬೇಕಾಗಿದ್ದು 2018ನೇ ಸಾಲಿಗೆ ವೈದ್ಯಕೀಯ ಹಾಗೂ ಸ್ನಾತ್ತಕೋತ್ತರ ಪದವಿ ವಿದ್ಯಾರ್ಥಿಗಳ ವ್ಯಾಸಂಗಕ್ಕಾಗಿ ಮತ್ತು ಭೋದಕರ ಅನುಕೂಲಕ್ಕಾಗಿ 46 ಅಂತರಾಷ್ಟ್ರಿಯ ಹಾಗೂ 63 ರಾಷ್ಟ್ರಿಯ ಒಟ್ಟು 109 ನಿಯತಕಾಲಿಕೆಗಳನ್ನು ಖರೀದಿಸಬೇಕಾಗಿದ್ದು, ಸದರಿ ನಿಯತಕಾಲಿಕೆಗಳ ಅಂದಾಜು ವೆಚ್ಚ ರಿಯಾಯಿತಿಗೆ ಮುಂಚೆ 39.85 ಲಕ್ಷಗಳಾಗಲಿದ್ದು ಇ–ಟೆಂಡರ್ ಕರೆಯುವ ಪ್ರಸ್ತಾವನೆಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಕೇಂದ್ರ ಗ್ರಂಥಾಲಯಕ್ಕೆ ಅಗತ್ಯವಿರುವ ನಿಯತಕಾಲಿಕೆಗಳನ್ನು ಕೆ.ಟಿ.ಟಿ.ಪಿ ನಿಯಮ 1999–2000ರ ಪ್ರಕಾರ ಇ–ಟೆಂಡರ್ ಕರೆಯುವುದೆಂದು ಮತ್ತು ಸದರಿ ನಿಯತಕಾಲಿಕೆಗಳ ಅಂದಾಜು ವೆಚ್ಚ ರಿಯಾಯಿತಿಗೆ ಮುಂಚೆ ರೂ.39.85 ಲಕ್ಷಗಳನ್ನು ಲೆಕ್ಕಶೀರ್ಷಿಕೆ 2210–05–105–1–49–103 ವೆಚ್ಚದಡಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.</td></tr>
<tr><td>5</td><td>2017–18ನೇ ಸಾಲಿಗೆ ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ಆವೃತ್ತಿ ಬದಲಾವಣೆಯಾಗಿರುವ</td><td>ಸಂಸ್ಥೆಯ ಕೇಂದ್ರ ಗ್ರಂಥಾಲಯ ಹಾಗೂ ವಿವಿಧ ವಿಭಾಗಗಳ ಗ್ರಂಥಾಲಯಗಳಲ್ಲಿರುವ ಪುಸ್ತಕಗಳ ಅವೃತ್ತಿ ಬದಲಾಗಿರುವುದರಿಂದ 2017–18ನೇ ಸಾಲಿಗೆ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಪರಾಮರ್ಷೆಯ ಪುಸ್ತಕಗಳು ಹೆಚ್ಚುವರಿಯಾಗಿ ಖರೀದಿಸಬೇಕಾಗಿದ್ದು ಸದರಿ ಪುಸ್ತಕಗಳ ಖರೀದಿ ವೆಚ್ಚ ಅಂದಾಜು</td></tr>
</table>

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ಪುಸ್ತಕಗಳ ಸರಬರಾಜಿಗೆ ಇ-ಟೆಂಡರ್ ಕರೆಯುವ ಬಗ್ಗೆ. | ರೂ.30.00 ಲಕ್ಷಗಳಾಗಲಿದ್ದು ಇ-ಟೆಂಡರ್ ಕರೆಯುವ ಪ್ರಸ್ತಾವನೆಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಕೇಂದ್ರ ಗ್ರಂಥಾಲಯಕ್ಕೆ ಅಗತ್ಯವಿರುವ ಆವೃತ್ತಿ ಬದಲಾಗಿರುವ ಪುಸ್ತಕಗಳ ಖರೀದಿಗೆ ಕೆ.ಟಿ.ಟಿ.ಪಿ ನಿಯಮ 1999-2000ರ ಪ್ರಕಾರ ಇ-ಟೆಂಡರ್/ ಪುಸ್ತಕ ಪ್ರದರ್ಶನ ಮೂಲಕ ಖರೀದಿಸುವುದೆಂದು ಮತ್ತು ಸದರಿ ಪುಸ್ತಕಗಳ ಅಂದಾಜು ವೆಚ್ಚ ರಿಯಾಯಿತಿಗೆ ಮುಂಚೆ ರೂ.30.00 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2210-05-105-1-49-103 ವೆಚ್ಚದಡಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 6 | ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿಯಲ್ಲಿ ಬಿಡುಗಡೆ ಯಾಗಿರುವ ಅನುದಾನದಲ್ಲಿ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಸಿ.-ಎಸ್.ಟಿ. ವಿದ್ಯಾರ್ಥಿಗಳಿಗೆ ಅವಶ್ಯಕವಿರುವ ಪುಸ್ತಕಗಳನ್ನು ಇ-ಟೆಂಡರ್ ಮೂಲಕ ಖರೀದಿಸಿ ವಿತರಿಸುವ ಬಗ್ಗೆ. | ಸಂಸ್ಥೆಯಲ್ಲಿ 2017-18ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 2014-15 ರಿಂದ 2017-2018ನೇ ಸಾಲಿನವರೆಗೆ ಪರಿಶಿಷ್ಟ ಜಾತಿಯ 68 ವಿದ್ಯಾರ್ಥಿಗಳು ಹಾಗೂ ಪರಿಶಿಷ್ಟ ಪಂಗಡದ 15 ವಿದ್ಯಾರ್ಥಿಗಳು ಒಟ್ಟು 83 ವೈದ್ಯಕೀಯ ವಿದ್ಯಾರ್ಥಿಗಳಿಗೆ ಹಾಗೂ 2015-16 ಮತ್ತು 2016-17ನೇ ಸಾಲಿನ ಸ್ನಾತಕೋತ್ತರ ಪದವಿಯ ಪರಿಶಿಷ್ಟ ಜಾತಿಯ 05 ವಿದ್ಯಾರ್ಥಿಗಳು ಹಾಗೂ ಪರಿಶಿಷ್ಟ ಪಂಗಡದ 01 ವಿದ್ಯಾರ್ಥಿ ಒಟ್ಟು 06 ವಿದ್ಯಾರ್ಥಿಗಳಿಗೆ ಪರಾಮರ್ಷೆಯ ಪುಸ್ತಕಗಳನ್ನು ಇ-ಟೆಂಡರ್ ಮೂಲಕ ಖರೀದಿಸಿ ನೀಡಬೇಕಾಗಿದ್ದು ಸದರಿ ಪುಸ್ತಕಗಳ ಅಂದಾಜು ಮೊತ್ತ ರೂ.74.00 ಲಕ್ಷಗಳಾಗಿದ್ದು, ರಿಯಾಯಿತಿಯ ನಂತರ ಅಂದಾಜುಮೊತ್ತ ರೂ.48.75 ಲಕ್ಷಗಳಾಗುತ್ತದೆ.<br>ಮುಂದುವರೆದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯೋಜನೆಯಡಿ ಸರ್ಕಾರದಿಂದ ರೂ.50.00 ಲಕ್ಷಗಳು ನಿಗದಿಯಾಗಿದ್ದು ಮೊದಲನೇ ಮತ್ತು ಎರಡನೇ ತ್ರೈಮಾಸಿಕವಾಗಿ ಕಂತಿನಲ್ಲಿ ಬಿಡುಗಡೆಯಾದ ರೂ.25.00 ಲಕ್ಷಗಳಲ್ಲಿ ದರಪಟ್ಟಿ ಆಧಾರದಲ್ಲಿ ಸ್ಟೆತೋಸ್ಕೋಪ್, ಏಪ್ರಾನ್ಸ್, ಡಿಜಿಟಲ್ ಬಿ.ಪಿ, ಮಾನಿಟರ್, ಎರ್ಮ್‌ಜೆನ್ಸಿ ಲೈಟ್, ನೀಹ್ಯಾಮರ್, ಪೆನ್‌ಟಾರ್ಚ್, ಮತ್ತು ಟ್ಯೂನಿಂಗ್ ಫೋರ್ಕ್‌ಗಳನ್ನು ರೂ.1.15ಲಕ್ಷಗಳನ್ನು ಖರ್ಚುಮಾಡಲಾಗಿದ್ದು ರೂ.23.85ಲಕ್ಷಗಳು ಬಾಕಿ ಉಳಿದಿರುತ್ತದೆ. 3ನೇ ಮತ್ತು 4ನೇ ತ್ರೈಮಾಸಿಕ ಕಂತಿನಲ್ಲಿ ರೂ.25.00 ಲಕ್ಷಗಳು ಸರ್ಕಾರದಿಂದ ಬಿಡುಗಡೆಯಾಗಬೇಕಾಗಿದ್ದು, ಸದರಿ ಅನುದಾನವನ್ನು ಬಳಸಿಕೊಳ್ಳುವ ಪ್ರಸ್ತಾವನೆಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಸರಬರಾಜು ಮಾಡಲು ತಯಾರಿಸಿದ್ದ ಅಂದಾಜು ಪಟ್ಟಿಯನ್ನು ಸಭೆಯಲ್ಲಿ ಸವಿವರವಾಗಿ ಪರಿಶೀಲಿಸಲಾಯಿತು. ಪ್ರತಿಯೊಬ್ಬ ವಿದ್ಯಾರ್ಥಿಗೆ |



ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

<table>
<tr><th>ಅಜೆಂಡಾ ಕ್ರಮ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td>ಖರೀದಿ ಮಾಡುವ ಪುಸ್ತಕದ ಬೆಲೆ ಮತ್ತು ಪರಿಮಾಣ ಅಧಿಕವಿರುವುದರಿಂದ ಪುಸ್ತಕಗಳ ಸಂಖ್ಯೆಯನ್ನು ಮಿತಿಗೊಳಿಸಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲಕರವಾಗುವ ಪುಸ್ತಕಗಳನ್ನು ಮಾತ್ರ ನಿಯಮಾನುಸಾರ ಖರೀದಿಸುವುದೆಂದು ಹಾಗೂ ಉಳಿಕೆ ಅನುದಾನವನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಬಡ ರೋಗಿಗಳ ಚಿಕಿತ್ಸೆಗೆ ಬಳಸಿಕೊಳ್ಳುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.<br>ಮುಂದುವರೆದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅನುದಾನ ಬಳಕೆ ವಿಷಯದಲ್ಲಿ ಮಾರ್ಗಸೂಚಿಗಳನ್ನು ರೂಪಿಸುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದ್ದು ಸರ್ಕಾರದಿಂದ ಪರಿಷ್ಕೃತ ಮಾರ್ಗಸೂಚಿಗಳು ಸಕಾಲದಲ್ಲಿ ಬಂದಲ್ಲಿ ಅದರಂತೆ ಕ್ರಮವಹಿಸುವುದೆಂದು ತೀರ್ಮಾನಿಸಲಾಯಿತು.</td></tr>
<tr><td>7</td><td>ಸಂಸ್ಥೆಯ ಬೋಧಕ ಆಸ್ಪತ್ರೆಯ ರೇಡಿಯಾಲಜಿ ವಿಭಾಗಕ್ಕೆ 2018–19ನೇ ಸಾಲಿಗೆ ಅಗತ್ಯವಿರುವ ಸಿ.ಆರ್ ಮತ್ತು ಸಿ.ಟಿ. ಫಿಲಂಗಳ ಸರಬರಾಜಿಗೆ ಇ–ಟೆಂಡರ್ ಕರೆಯುವ ಬಗ್ಗೆ.</td><td>ಸಂಸ್ಥೆಯ ಬೋಧಕ ಆಸ್ಪತ್ರೆಯ ರೇಡಿಯಾಲಜಿ ವಿಭಾಗಕ್ಕೆ ಸಿ.ಆರ್ ಫಿಲಂ ಸರಬರಾಜಿಗೆ 2017–18ನೇ ಸಾಲಿನಲ್ಲಿ ಕರೆಯಲಾಗಿದ್ದ ಟೆಂಡರ್ ಅವಧಿಯು ಫೆಬ್ರವರಿ–2018ಕ್ಕೆ ಮುಕ್ತಾಯಗೊಳ್ಳಲಿರುವುದರಿಂದ 2018–19ನೇ ಸಾಲಿಗೆ ಕೆಳಕಂಡಂತೆ ಅವಶ್ಯಕವಿರುವ ಸಿ.ಆರ್. ಫಿಲಂಗೆ ಹೊಸದಾಗಿ ಇ–ಟೆಂಡರ್ ಕರೆಯುವ ಪ್ರಸ್ತಾವನೆಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.
<table>
<tr><th>Sl No</th><th>Particulars</th><th>Qty</th><th>Estimated Rate</th><th>Total</th></tr>
<tr><td>1</td><td>C.R Films(10X8)</td><td>500 Box</td><td>6,000-00</td><td>30,00,000-00</td></tr>
<tr><td>2</td><td>C.T Films(14X17)</td><td>20 Box</td><td>10,500-00</td><td>2,10,000-00</td></tr>
<tr><td colspan="3">Total</td><td></td><td>32,10,000-00</td></tr>
</table>
ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಎಕ್ಸರೇ ಮತ್ತು ಸಿ.ಟಿ. ಸ್ಕ್ಯಾನ್ ಪರೀಕ್ಷೆಗೆ ಒಳಪಡುವ ರೋಗಿಗಳಿಗೆ PACKS ಮೂಲಕ ರಿಪೋರ್ಟ್‌ಗಳನ್ನು ನೀಡುವ ವ್ಯವಸ್ಥೆಯನ್ನು ಬಹುತೇಕ ಸಂಸ್ಥೆಗಳಲ್ಲಿ ಅನುಸರಿಸುತ್ತಿದ್ದು, ಇದಕ್ಕೆ ತಗಲುವ ವೆಚ್ಚವು ಅತಿಕಡಿಮೆ ಇರುವುದರಿಂದ ಫಿಲಂಗಳನ್ನು ಖರೀದಿಸುವುದರ ಬದಲು PACKS ಸೇವೆ ಅಳವಡಿಸಿಕೊಳ್ಳಲು ಟೆಂಡರ್ ಕರೆಯುವುದೆಂದು ಹಾಗೂ ಎಮ್.ಎಲ್.ಸಿ. ಕೇಸ್‌ಗಳಿಗೆ ಹಾಗೂ ಇತರೆ ಅತಿ ಅವಶ್ಯಕವಿರುವ ಕೇಸುಗಳಿಗೆ ಮಾತ್ರ ಅಗತ್ಯವಿರುವಷ್ಟು ಫಿಲಂಗಳಿಗೆ ಸರಬರಾಜು ಪಡೆಯುವುದೆಂದು ತೀರ್ಮಾನಿಸಿ ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210–05–105–1–49–103 ವೆಚ್ಚದಡಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.</td></tr>
<tr><td>8</td><td>ಸಂಸ್ಥೆಯ ಬೋಧಕ ಆಸ್ಪತ್ರೆ ಮತ್ತು ಕಾಲೇಜು ವಿಭಾಗಗಳಿಗೆ</td><td>ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಇತರೆ ಸಂಸ್ಥೆಗಳಿಗೆ ಅಗತ್ಯವಿದ್ದ ಕಛೇರಿ ಫೈಲ್‌ಗಳು, ಇಂಡೆಂಟ್ ಪುಸ್ತಕ, ಸ್ಟೂಡೆಂಟ್ಸ್ ರೆಕಾರ್ಡ್, ವೈದ್ಯಕೀಯ ಪ್ರಮಾಣ ಪತ್ರಗಳು, ಕೇಸ್‌ಶೀಟ್ಸ್, ರಿಪೋರ್ಟ್ ಪ್ಯಾಡ್ಸ್, ಓ.ಪಿ.ಡಿ.</td></tr>
</table>

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ಅಗತ್ಯವಿರುವ ಮುದ್ರಣ ಸಾಮಗ್ರಿಗಳನ್ನು ಸರಬರಾಜು ಪಡೆಯಲು 2018–19ನೇ ಸಾಲಿಗೆ ಒಂದು ವರ್ಷದ ಅವಧಿಗೆ ಇ–ಟೆಂಡರ್ ಕರೆಯುವ ಬಗ್ಗೆ. | ಕಾರ್ಡ್ಸ್, ಹಾಗೂ ಇತರೆ ಮುದ್ರಣ ಸಾಮಗ್ರಿಗಳನ್ನು ಸರಬರಾಜು ಪಡೆಯಲು ಕರೆಯಲಾಗಿದ್ದ ಟೆಂಡರ್ ಅವಧಿಯು ದಿನಾಂಕ:28-07-2018ಕ್ಕೆ ಮುಕ್ತಾಯಗೊಳ್ಳಲಿದ್ದು, 2018-19ನೇ ಸಾಲಿಗೆ ಅವಶ್ಯಕವಿರುವ ಮುದ್ರಣ ಸಾಮಗ್ರಿಗಳಿಗೆ ರೂ.12.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಇ–ಟೆಂಡರ್ ಕರೆಯುವ ಪ್ರಸ್ತಾವನೆಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಸಂಸ್ಥೆಗಳಿಗೆ 2018–19ನೇ ಸಾಲಿಗೆ ಅವಶ್ಯಕವಿರುವ ಮುದ್ರಣ ಸಾಮಗ್ರಿಗಳ ಅಂದಾಜು ವೆಚ್ಚ ರೂ.12.00 ಲಕ್ಷಗಳ ಪ್ರಸ್ತಾವನೆಯನ್ನು ಒಪ್ಪಿ ಕೆ.ಟಿ.ಟಿ.ಪಿ ನಿಯಮ 1999–2000ರ ಪ್ರಕಾರ ಇ–ಟೆಂಡರ್ ಕರೆಯುವುದೆಂದು ಮತ್ತು ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210–05–105–1–49–103 ರಡಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 9 | ಹಿಮ್ಸ್ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಬೋಧಕ ಆಸ್ಪತ್ರೆ ಮತ್ತು ನರ್ಸಿಂಗ್ ಕಾಲೇಜು, ಹಾಸನ ಮತ್ತು ಹೊಳೆನರಸೀಪುರ, ಈ ಸಂಸ್ಥೆಗಳಿಗೆ ಅಗತ್ಯವಿರುವ ಕಛೇರಿ ಸ್ಟೇಷನರಿಗಳ ಸರಬರಾಜಿಗೆ 2018–19ನೇ ಸಾಲಿಗೆ ಒಂದು ವರ್ಷದ ಅವಧಿಗೆ ಇ–ಟೆಂಡರ್ ಬಗ್ಗೆ. | ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಇತರೆ ಸಂಸ್ಥೆಗಳಿಗೆ ಅಗತ್ಯವಿದ್ದ ಕಛೇರಿ ಸ್ಟೇಷನರಿಗಳ ವಸ್ತುಗಳ ಸರಬರಾಜಿಗೆ ಕರೆಯಲಾಗಿದ್ದ ಟೆಂಡರ್ ಅವಧಿಯು ದಿನಾಂಕ:26.05.2018ಕ್ಕೆ ಮುಕ್ತಾಯಗೊಳ್ಳಲಿದ್ದು, 2018–19ನೇ ಸಾಲಿಗೆ ಅವಶ್ಯಕವಿರುವ ಕಛೇರಿ ಸ್ಟೇಷನರಿ ವಸ್ತುಗಳ ಸರಬರಾಜಿಗೆ ರೂ.7.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಇ–ಟೆಂಡರ್ ಕರೆಯುವ ಪ್ರಸ್ತಾವನೆಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಸಂಸ್ಥೆಗಳಿಗೆ 2018–19ನೇ ಸಾಲಿಗೆ ಅವಶ್ಯಕವಿರುವ ಕಛೇರಿ ಸ್ಟೇಷನರಿ ವಸ್ತುಗಳ ಸರಬರಾಜಿನ ಅಂದಾಜು ವೆಚ್ಚ ರೂ.7.00 ಲಕ್ಷಗಳ ಪ್ರಸ್ತಾವನೆಯನ್ನು ಒಪ್ಪಿ ಕೆ.ಟಿ.ಟಿ.ಪಿ ನಿಯಮ 1999–2000ರ ಪ್ರಕಾರ ಇ–ಟೆಂಡರ್ ಕರೆಯುವುದೆಂದು ಮತ್ತು ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210–05–105–1–49–103 ರಡಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 10 | ಹಿಮ್ಸ್ ಆಸ್ಪತ್ರೆ/ ಕಾಲೇಜು / ಬಾಲಕ & ಬಾಲಕಿ ವಸತಿಗೃಹ/ ವೈದ್ಯರವಸತಿ ಗೃಹ ಇಲ್ಲಿನ ದಿನನಿತ್ಯದ ಸಾಮಾನ್ಯ ಮತ್ತು | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹೊಸ ಆಸ್ಪತ್ರೆ ಮತ್ತು ಹಳೆಯ ಆಸ್ಪತ್ರೆಯ ಕಟ್ಟಡಗಳಲ್ಲಿ ಸಂಗ್ರಹವಾಗುವ ದಿನನಿತ್ಯದ ಸಾಮಾನ್ಯ ಮತ್ತು ಆಹಾರ ತ್ಯಾಜ್ಯಗಳ ವಿಲೇವಾರಿಯನ್ನು 2012ನೇ ಇಸವಿಯಿಂದ ಮಾಸಿಕ ರೂ.26,000–00ಗಳನ್ನು ಪಾವತಿಸಿ ಪ್ರತಿದಿನ ವಿಲೇವಾರಿ ಮಾಡುತ್ತಿದ್ದು, ವಾರ್ಷಿಕ ವೆಚ್ಚ ರೂ.3.12 ಲಕ್ಷಗಳಿಗೂ ಅಧಿಕವಾಗುತ್ತಿರುವುದರಿಂದ ನಿಯಮಾನುಸಾರ ಟೆಂಡರ್ ಕರೆಯುವ ಪ್ರಸ್ತಾವನೆಯನ್ನು ಸಂಸ್ಥೆಯ |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ಆಹಾರ ತ್ಯಾಜ್ಯ ವಿಲೇವಾರಿ ಮಾಡಲು 2018-19ನೇ ಸಾಲಿಗೆ ಒಂದು ವರ್ಷದ ಅವಧಿಗೆ ಇ-ಟೆಂಡರ್ ಕರೆಯುವ ಬಗ್ಗೆ . | ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಾಮಾನ್ಯ ಮತ್ತು ಆಹಾರ ತ್ಯಾಜ್ಯ ವಸ್ತುಗಳ ವಿಲೇವಾರಿಯ ಬಾಬ್ತು ಅಧಿಕವಾಗಿರುವುದರಿಂದ ಕೆ.ಟಿ.ಟಿ.ಪಿ ನಿಯಮ 1999-2000ರ ಪ್ರಕಾರ ಇ-ಟೆಂಡರ್ ಕರೆಯುವುದೆಂದು ಹಾಗೂ ಸದರಿ ವೆಚ್ಚವನ್ನು ಲೆಕ್ಕಶೀರ್ಷಿಕೆ 2210-05-105-1-49-103 ಅಡಿಯಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.<br>ಮುಂದುವರೆದು ಸಂಸ್ಥೆಯಲ್ಲಿ ಸಂಗ್ರಹವಾಗುವ ಸಾಮಾನ್ಯ ಹಾಗೂ ಆಹಾರ ತ್ಯಾಜ್ಯ ವಸ್ತುಗಳನ್ನು ಶೇಖರಿಸಿ ಬಯೋಗ್ಯಾಸ್ ಆಗಿ ಪರಿವರ್ತಿಸಿ ಉಪಯೋಗಿಸಿ ಕೊಳ್ಳುವುದರ ಬಗ್ಗೆ ಯೋಜನೆಯನ್ನು ಸಿದ್ಧಪಡಿಸಿ ಮುಂದಿನ ಸಭೆಯಲ್ಲಿ ಅನುಮೋದನೆ ಪಡೆದುಕೊಳ್ಳುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 11 | ಸಂಸ್ಥೆಯ ಬೋಧಕ ಆಸ್ಪತ್ರೆಯ ಸ್ತ್ರೀ ಮತ್ತು ಮಕ್ಕಳ ಚಿಕಿತ್ಸಾ ವಿಭಾಗಕ್ಕೆ ಅಗತ್ಯವಿರುವ Lapro scopyಮತ್ತು Hysteroscopy Set ಉಪಕರಣವನ್ನು ಇ-ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ. | ಸಂಸ್ಥೆಯ ಬೋಧಕ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀ ರೋಗ ಚಿಕಿತ್ಸಾ ವಿಭಾಗಕ್ಕೆ ಶಸ್ತ್ರ ಚಿಕಿತ್ಸೆಗೆ ಒಳಗಾಗುತ್ತಿರುವ ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಸದರಿ ವಿಭಾಗದಲ್ಲಿರುವ ಲ್ಯಾಪ್ರೋಸ್ಕೋಪಿ ಉಪಕರಣವು ಬಹಳ ಹಿಂದೆ ಖರೀದಿಸಿದ್ದು ಸದರಿ ಉಪಕರಣವು ಕಾರ್ಯನಿರ್ವಹಿಸದಿರುವುದರಿಂದ ಹೊಸದಾಗಿ 2 Ring applicators with set, 2 Laproscopy with camera ಹಾಗೂ Hysteroscopy Set ಇತರೆ ಸಣ್ಣಪುಟ್ಟ ಉಪಕರಣಗಳನ್ನು ತುರ್ತಾಗಿ ಖರೀದಿಸಿಕೊಡುವಂತೆ ವಿಭಾಗದ ನೋಡಲ್ ಅಧಿಕಾರಿಗಳು ವೈದ್ಯಕೀಯ ಅಧೀಕ್ಷಕರ ಮುಖಾಂತರ ಸಲ್ಲಿಸಿದ್ದ ಕೆಳಕಂಡ ಪ್ರಸ್ತಾವನೆಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br><br>ಕ್ರಮ ಸಂಖ್ಯೆ / ಉಪಕರಣಗಳ ಹೆಸರು / ಪರಿಮಾಣ / ಅಂದಾಜು ಮೊತ್ತ<br>1 / Laproscopy with camera / 2 / 19.76<br>2 / Hysteroscopy Set / 1 / 2.50<br>ಒಟ್ಟು ಮೊತ್ತ / / **22.26**<br><br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಬೋಧಕ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ಚಿಕಿತ್ಸಾ ವಿಭಾಗಕ್ಕೆ ಬರುತ್ತಿರುವ ರೋಗಿಗಳ ಸಂಖ್ಯೆ ಹೆಚ್ಚಿರುವುದರಿಂದ ಮತ್ತು ಬಡ ರೋಗಿಗಳ ಶಸ್ತ್ರ ಚಿಕಿತ್ಸೆಗೆ ಅನುಕೂಲವಾಗುವಂತೆ ಮೇಲ್ಕಂಡ ಉಪಕರಣಗಳನ್ನು ಕೆ.ಟಿ.ಟಿ.ಪಿ ನಿಯಮ 1999-2000ರ ಪ್ರಕಾರ ಇ-ಟೆಂಡರ್ ಕರೆದು ಖರೀದಿಸುವುದೆಂದು ಹಾಗೂ ಸದರಿ ವೆಚ್ಚವನ್ನು ಆಸ್ಪತ್ರೆಯ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 12 | ಹಿಮ್ಸ್ ಸಂಸ್ಥೆಯ ಆವರಣದಲ್ಲಿ ನಿರ್ಮಿಸಿರುವ ತ್ಯಾಜ್ಯ ನೀರು | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ಘನ ತ್ಯಾಜ್ಯ ನೀರು ಶುದ್ಧೀಕರಣ ಮತ್ತು ಸಂಬಂಧಿತ ಕಾಮಗಾರಿಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ, ಹಾಸನ ರವರಿಂದ |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
| --- | --- | --- |
| | ಶುದ್ಧೀಕರಣ ಘಟಕ (STP-ETP) ಮತ್ತು ಸಂಬಂಧಿತ ಘಟಕಗಳ ನಿರ್ವಹಣೆಗೆ ಇ-ಟೆಂಡರ್ ಕರೆಯುವ ಬಗ್ಗೆ. | ನಿರ್ಮಿಸಲಾಗಿದ್ದು, ಸದರಿ ಘಟಕದ ನಿರ್ವಹಣೆಯನ್ನು Aqua Tech Enviro Engineers, Bangalore ಇವರಿಗೆ ದರಪಟ್ಟಿ ಆಧಾರದಲ್ಲಿ ಪ್ರತಿ ಮಾಹೆ ರೂ.98,000/-ಗಳಂತೆ ಪಾವತಿ ಮಾಡಲಾಗುತ್ತಿದ್ದು ನಿರ್ವಹಣೆ ಅವಧಿಯು ದಿನಾಂಕ:31-03-2018ಕ್ಕೆ ಮುಕ್ತಾಯಗೊಳ್ಳುತ್ತಿರುವ ನಿಯಮಾನುಸಾರ ಟೆಂಡರ್ ಕರೆಯುವ ಪ್ರಸ್ತಾವನೆಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕ್ಷವಾಗಿ ಚರ್ಚಿಸಿ ಸಂಸ್ಥೆಯ ಆವರಣದಲ್ಲಿರುವ ಘನ ತ್ಯಾಜ್ಯ ನೀರು ಶುದ್ಧೀಕರಣ ಘಟಕದ ನಿರ್ವಹಣೆ ವೆಚ್ಚವು ರೂ.1.00 ಲಕ್ಷ ಮೀರುವುದರಿಂದ ಕೆ.ಟಿ.ಟಿ.ಪಿ ನಿಯಮಾನುಸಾರ ಇ-ಟೆಂಡರ್ ಕರೆಯುವುದೆಂದು ಮತ್ತು ಸದರಿ ವೆಚ್ಚವನ್ನು ಸಂಸ್ಥೆಯ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 13 | ಬೋಧಕ ಆಸ್ಪತ್ರೆಗೆ ಅಗತ್ಯವಿರುವ ಲಿನನ್ ಸಾಮಗ್ರಿಗಳನ್ನು 4(ಜಿ) ಯಿಂದ ವಿನಾಯಿತಿ ಪಡೆದಿರುವ ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾ ಮಂಡಳಿ ನಿಯಮಿತ, ಬೆಂಗಳೂರು ಇವರಿಂದ ಖರೀದಿಸುವ ಬಗ್ಗೆ. | ಸಂಸ್ಥೆಯ ಬೋಧಕ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯನ್ನು 450 ರಿಂದ 750 ಹಾಸಿಗೆಗಳ ಸಂಖ್ಯೆಗೆ ಮೇಲ್ದರ್ಜೆಗೇರಿಸಿದ್ದು ಜಿಲ್ಲೆ ಮತ್ತು ಸುತ್ತ- ಮುತ್ತಲಿನ ಜಿಲ್ಲೆಗಳಿಂದ ಚಿಕಿತ್ಸೆಗಾಗಿ ಬರುತ್ತಿರುವ ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದರಿಂದ ಹಾಸಿಗೆಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಬೆಡ್‌ಶೀಟ್ಸ್, ಬ್ಲಾಂಕೆಟ್ಸ್ ಹಾಗೂ ಹಾಸಿಗೆಗಳನ್ನು ಹೊಂದಿರಬೇಕಾಗಿರುತ್ತದೆ. ಜೊತೆಗೆ ಕಾಯಕಲ್ಪ ಯೋಜನೆಯು ಜಾರಿಯಲ್ಲಿರುವುದರಿಂದ ಅಗತ್ಯವಿರುವ ಈ ಕೆಳಕಂಡ ಲೆನಿನ್ ಸಾಮಗ್ರಿಗಳನ್ನು ಸರಬರಾಜು ಮಾಡಿಕೊಡುವಂತೆ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 610 ವೆಚ್ಚ -12/17, ದಿನಾಂಕ:04-07-2017ರ ಆದೇಶದಲ್ಲಿ ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ನಿಯಮಿತ, ಬೆಂಗಳೂರು ಇವರಿಂದ ಉತ್ಪಾದಿಸಲ್ಪಡುವ ಸಿದ್ಧವಸ್ತುಗಳ ರೂ.10.00 ಲಕ್ಷಗಳ ಗರಿಷ್ಠ ಮಿತಿಯಲ್ಲಿ ಒಂದು ವರ್ಷದ ಅವಧಿಗೆ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ -1999 ಕಾಲಂ 4(ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಸಂಗ್ರಹಣಾ ಪ್ರಾಧಿಕಾರಿಗಳಿಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿರುವುದರಿಂದ ಸದರಿ ಸಂಸ್ಥೆಯಿಂದ ಬೋಧಕ ಆಸ್ಪತ್ರೆಗೆ ಅಗತ್ಯವಿರುವ ಈ ಕೆಳಕಂಡ ಲಿನಿನ್ ಸಾಮಗ್ರಿಗಳನ್ನು ಸರಬರಾಜು ಮಾಡುವಂತೆ ಸಲ್ಲಿಸಿದ್ದ ಮನವಿ ಪತ್ರವನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

<table>
<tr><th>ಅಜೆಂಡಾ ಕ್ರಮ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td>
<table>
<tr><th>Sl. No.</th><th>Name of the Linen</th><th>Rate Per Unit (ಅಂದಾಜು ವೆಚ್ಚ)</th><th>Quantity</th><th>Total Amount</th></tr>
<tr><td>1</td><td>Bed Sheets<br>(Green 750/Blue 750) Size 70x90</td><td>453.00</td><td>1500</td><td>6,79,500.00</td></tr>
<tr><td>2</td><td>Mosquito Net 40x80x54</td><td>785.00</td><td>400</td><td>3,14,000.00</td></tr>
<tr><td>3</td><td>Turkey Towel 27x54</td><td>227.00</td><td>25</td><td>6,810.00</td></tr>
<tr><td></td><td>Total</td><td></td><td></td><td>9,99,175.00</td></tr>
</table>
<u>ಅಜೆಂಡಾ ಕ್ರಮ ಸಂಖ್ಯೆ: 13 ಮತ್ತು 14ರ</u> ಎರಡು ವಿಷಯಗಳ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ನಿಯಮಿತ, ಬೆಂಗಳೂರು ಇವರಿಂದ ಉತ್ಪಾದಿಸಲ್ಪಡುವ ಸಿದ್ಧವಸ್ತುಗಳು ತೆಂಗಿನ ನಾರಿನ ಉತ್ಪನ್ನಗಳಾಗಿರುವುದರಿಂದ ಬೇಡಿಕೆ ಪಟ್ಟಿಯಲ್ಲಿ ಕೋರಿರುವ ಲೆನಿನ್ ಮತ್ತು ಇತರೆ ಸಾಮಗ್ರಿಗಳು ಸದರಿ ಸಂಸ್ಥೆಯ ವ್ಯಾಪ್ತಿಗೆ ಬರುವುದಿಲ್ಲವೆಂದು ಪರಿಗಣಿಸಿ ಅಜೆಂಡಾ ಕ್ರಮ ಸಂಖ್ಯೆ: 13 ಮತ್ತು 14ರ ಎರಡು ಪ್ರಸ್ತಾವನೆಗಳಲ್ಲಿರುವ ಬೇಡಿಕೆ ಪಟ್ಟಿಯ ಪೈಕಿ 4(ಜಿ)ಅಡಿ ವಿನಾಯಿತಿ ಇರುವ ತೆಂಗಿನ ನಾರಿನ ಉತ್ಪನ್ನಗಳನ್ನು ಮಾತ್ರ ಗರಿಷ್ಠ ರೂ.5.00 ಲಕ್ಷ ಮೀರದಂತೆ ಖರೀದಿಸಬಹುದೆಂದು ನಿರ್ಣಯಿಸಿ ಉಳಿದಂತೆ ಲೆನಿನ್ ವಸ್ತುಗಳನ್ನು ಕೆ.ಟಿ.ಟಿ.ಪಿ ನಿಯಮಾನುಸಾರ ಇ-ಟೆಂಡರ್ ಕರೆದು ಖರೀದಿಸುವುದೆಂದು ಮತ್ತು ಸದರಿ ವೆಚ್ಚವನ್ನು ಸಂಸ್ಥೆಯ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ತೀರ್ಮಾನಿಸಲಾಯಿತು.</td></tr>
<tr><td>14</td><td>ಬೋಧಕ ಆಸ್ಪತ್ರೆಗೆ ಅಗತ್ಯವಿರುವ ಲಿನನ್ ಹಾಗೂ ಇತರೆ ಸಾಮಗ್ರಿಗಳನ್ನು 4(ಜಿ)ಯಿಂದ ವಿನಾಯಿತಿ ಪಡೆದಿರುವ ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ನಿಯಮಿತ, ಬೆಂಗಳೂರು ಇವರಿಂದ</td><td>ಸಂಸ್ಥೆಯ ಬೋಧಕ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯನ್ನು 450 ರಿಂದ 750 ಹಾಸಿಗೆಗಳ ಸಂಖ್ಯೆಗೆ ಮೇಲ್ದರ್ಜೆಗೇರಿಸಿದ್ದು ಜಿಲ್ಲೆ ಮತ್ತು ಸುತ್ತ- ಮುತ್ತಲಿನ ಜಿಲ್ಲೆಗಳಿಂದ ಚಿಕಿತ್ಸೆಗಾಗಿ ಬರುತ್ತಿರುವ ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದರಿಂದ ಹಾಸಿಗೆಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಬೆಡ್‌ಶೀಟ್ಸ್, ಬ್ಲಾಂಕೆಟ್ಸ್ ಹಾಗೂ ಹಾಸಿಗೆಗಳನ್ನು ಹೊಂದಿರಬೇಕಾಗಿರುತ್ತದೆ. ಜೊತೆಗೆ ಕಾಯಕಲ್ಪ ಯೋಜನೆಯು ಜಾರಿಯಲ್ಲಿರುವುದರಿಂದ ಅಗತ್ಯವಿರುವ ಈ ಕೆಳಕಂಡ ಲೆನಿನ್ ಸಾಮಗ್ರಿಗಳನ್ನು ಸರಬರಾಜು ಮಾಡಿಕೊಡುವಂತೆ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 610 ವೆಚ್ಚ -12/17, ದಿನಾಂಕ:04-07-2017ರ ಆದೇಶದಲ್ಲಿ ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ನಿಯಮಿತ, ಬೆಂಗಳೂರು ಇವರಿಂದ ಉತ್ಪಾದಿಸಲ್ಪಡುವ ಸಿದ್ಧವಸ್ತುಗಳ ರೂ.10.00 ಲಕ್ಷಗಳ ಗರಿಷ್ಠ ಮಿತಿಯಲ್ಲಿ ಒಂದು ವರ್ಷದ ಅವಧಿಗೆ ಖರೀದಿಸಲು ಕರ್ನಾಟಕ ಸಾರ್ವಜನಿಕ</td></tr>
</table>

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

<table>
<tr><th>ಅಜೆಂಡಾ ಕ್ರಮ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td>ಖರೀದಿಸುವ ಬಗ್ಗೆ.</td><td>ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ –1999 ಕಾಲಂ 4(ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಸಂಗ್ರಹಣಾ ಪ್ರಾಧಿಕಾರಿಗಳಿಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿರುವುದರಿಂದ ಸದರಿ ಸಂಸ್ಥೆಯಿಂದ ಬೋಧಕ ಆಸ್ಪತ್ರೆಗೆ ಅಗತ್ಯವಿರುವ ಈ ಕೆಳಕಂಡ ಲಿನಿನ್ ಸಾಮಗ್ರಿಗಳನ್ನು ಸರಬರಾಜು ಮಾಡುವಂತೆ ಸಲ್ಲಿಸಿದ್ದ ಮನವಿ ಪತ್ರವನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.
<table>
<tr><th>Sl. No.</th><th>Name of the Linen</th><th>Rate Per Unit (ಅಂದಾಜು ವೆಚ್ಚ)</th><th>Quantity</th><th>Total Amount</th></tr>
<tr><td>1</td><td>Red Wollen Blankets (60x90)</td><td>789.00</td><td>500</td><td>394500.00</td></tr>
<tr><td>2</td><td>Rubbrised coir Mattress72x36x4</td><td>4725.00</td><td>60</td><td>283500.00</td></tr>
<tr><td>3</td><td>Pillow cover 20x30</td><td>99.00</td><td>1000</td><td>99000.00</td></tr>
<tr><td>4</td><td>Doctors coat full arms size Free size</td><td>353.00</td><td>50</td><td>17650.00</td></tr>
<tr><td>5</td><td>Doctors Gown Navyblue free size</td><td>314.00</td><td>100</td><td>31400.00</td></tr>
<tr><td>6</td><td>Patients OT Gown Merun /Dark Green (free Size) 50 M & 50G</td><td>313.00</td><td>100</td><td>31300.00</td></tr>
<tr><td>7</td><td>OT Nurses pant and shirt free size stripes</td><td>607.00</td><td>100</td><td>60700.00</td></tr>
<tr><td>8</td><td>OT Group D Pant and Shirts Free size grey color</td><td>607.00</td><td>100</td><td>60700.00</td></tr>
<tr><td>9</td><td>Turkey Towel 30x 60</td><td>269.00</td><td>50</td><td>13450.00</td></tr>
<tr><td>10</td><td>Turkey Towel 27x54</td><td>227.00</td><td>25</td><td>5675.00</td></tr>
<tr><td></td><td colspan="3">Total</td><td>9,97,875.00</td></tr>
</table>
ಅಜೆಂಡಾ ಕ್ರಮ ಸಂಖ್ಯೆ: 13 ರಲ್ಲಿ ತೀರ್ಮಾನ ಕೈಗೊಳ್ಳಲಾಗಿರುತ್ತದೆ.</td></tr>
<tr><td>15</td><td>ರೇಡಿಯೋಥೆರಾಪಿ ವಿಭಾಗದ ಕೊಬಾಲ್ಟ್ 60(ಬಾಬಾಟ್ರಾನ್–II) ಉಪಕರಣದ ವಾರ್ಷಿಕ ನಿರ್ವಹಣೆಯ ಬಿಲ್ ಬಾಬ್ತನ್ನು ಆರ್ಥಿಕ ಸಮಿತಿ ಸಭೆಯ ಘಟನ್ನೋತ್ತರ ನಿರೀಕ್ಷಣೆ ಮೇರೆಗೆ</td><td>ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಖಾಯಿಲೆಗೆ ಒಳಪಡುವ ರೋಗಿಗಳ ಚಿಕಿತ್ಸೆಗಾಗಿ Cobalt Telethearaphy unit Bhabha Tron –II ಉಪಕರಣವನ್ನು ಅಳವಡಿಸಿದ್ದು, ಸದರಿ ಉಪಕರಣದ ನಿರ್ವಹಣೆಯನ್ನು ದಿನಾಂಕ:22-8-2014 ರಿಂದ ಅನ್ವಯಿಸುವಂತೆ ಮೂರು ವರ್ಷಗಳ ಅವಧಿಗೆ M/s Panacea medical technologies PVT.LTD ರವರಿಗೆ ನೀಡಿದ್ದು, ಮೂರು ವರ್ಷಗಳ ಒಟ್ಟು ನಿರ್ವಹಣೆ ಬಾಬ್ತು ರೂ.12,27,308-00ಗಳನ್ನು ಲೆಕ್ಕ ಶೀರ್ಷಿಕೆ 4210 ಅಡಿಯಲ್ಲಿ ಭರಿಸಲಾಗಿರುತ್ತದೆ.<br>ಸದರಿ ಉಪಕರಣದ ನಿರ್ವಹಣೆ ಅವಧಿಯು ದಿನಾಂಕ:21.08.2017ಕ್ಕೆ ಮುಕ್ತಾಯಗೊಂಡಿದ್ದರಿಂದ ಉಪಕರಣದ ಸಂರಕ್ಷಣೆ ಹಿತದೃಷ್ಟಿಯಿಂದ ಏಕೈಕ ಉತ್ಪಾದಕರು ಹಾಗೂ ಸರಬರಾಜುದಾರರಾದ M/s Panacea</td></tr>
</table>

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ಪಾವತಿ ಮಾಡಿರುವುದನ್ನು ಅನುಮೋದಿಸುವ ಬಗ್ಗೆ. | medical technologies PVT.LTD ಸಂಸ್ಥೆಯವರೊಂದಿಗೆ ದರ ಸಂದಾನ ನಡೆಸಿ ಆರ್ಥಿಕ ಸಮಿತಿ ಮತ್ತು ಆಡಳಿತ ಮಂಡಳಿಯ ಘಟನ್ನೋತ್ತರ ಅನುಮೋದನೆ ನಿರೀಕ್ಷಣೆಯ ಮೇರೆಗೆ ದಿನಾಂಕ:22.08.2017 ರಿಂದ 21.08.2020ರವರೆಗೆ 03 ವರ್ಷಗಳ (AMC) ನಿರ್ವಹಣೆ ಮತ್ತು 3 ವರ್ಷಗಳ ನಿರ್ವಹಣೆಯ ಒಟ್ಟು ಬಾಬ್ತು ರೂ.17,15,544.00 ಗಳನ್ನು 2 ಸಮಕಂತುಗಳಲ್ಲಿ ಪಾವತಿ ಮಾಡಲು ನೀಡಿರುವ ಕಾರ್ಯಾದೇಶಕ್ಕೆ ಅನುಮೋದನೆ ನೀಡುವ ಪ್ರಸ್ತಾವನೆಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಉಪಕರಣದ ನಿರ್ವಹಣೆ ಬಾಬ್ತು ರೂ.1.00ಲಕ್ಷಕ್ಕೂ ಅಧಿಕವಿರುವುದರಿಂದ Cobalt Telethearaphy unit Bhabha Tron –II ಉಪಕರಣದ ಎ.ಎಮ್.ಸಿ.ಯ ವಾರ್ಷಿಕ ನಿರ್ವಹಣೆಯನ್ನು ನಿಯಮಾನುಸಾರ ಟೆಂಡರ್ ಕರೆಯಬೇಕಾಗಿರುತ್ತದೆ. ಆದರೆ ಸದರಿ ಉಪಕರಣದ ನಿರ್ವಹಣೆ ನಿರ್ವಹಿಸಲು ಬೇರೆ ಯಾವುದೇ ಸಂಸ್ಥೆಗಳು ಇಲ್ಲದಿರುವುದರಿಂದ ಉತ್ಪಾದಕರು ಹಾಗೂ ಸರಬರಾಜುದಾರರಾದ M/s Panacea medical technologies PVT.LTD ಸಂಸ್ಥೆಯವರೊಂದಿಗೆ ದರ ಸಂದಾನ ನಡೆಸಿ ಮೂರು ವರ್ಷಗಳ ಅವಧಿಗೆ ರೂ.17,15,544.00 ಗಳನ್ನು 2 ಸಮಕಂತುಗಳಲ್ಲಿ ಪಾವತಿ ಮಾಡಲು ನೀಡಿರುವ ಕಾರ್ಯಾದೇಶವನ್ನು ಒಪ್ಪಿ ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ 4210–03–105–1–02–386 ರಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 16 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರ ವೈದ್ಯಕೀಯ ವೆಚ್ಚದ ಅರ್ಹ ಬಾಬ್ತನ್ನು ಪಾವತಿಸುವ ಬಗ್ಗೆ. | ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳ ವೈದ್ಯಕೀಯ ವೆಚ್ಚ ಮರುಪಾವತಿಸಲು “ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು” ರವರು ಶಿಫಾರಸ್ಸು ಮಾಡಿರುವ ಮೊತ್ತವನ್ನು ಸಂಸ್ಥೆಯ ಆರ್ಥಿಕ ಸಮಿತಿ ಮತ್ತು ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದು ತದನಂತರವೇ ಪಾವತಿಸಲು ಕ್ರಮವಹಿಸುವಂತೆ ಸರ್ಕಾರವು ಈ ಹಿಂದೆ ಜಾರಿಗೊಳಿಸಿದ್ದ ಆದೇಶದನ್ವಯ ಸಂಸ್ಥೆಯ ಸಿಬ್ಬಂದಿ ವರ್ಗದವರ ವೈದ್ಯಕೀಯ ವೆಚ್ಚದ ಮರುಪಾವತಿಯ ಬಿಲ್ಲುಗಳನ್ನು ಪರಿಶೀಲನೆಗಾಗಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರುರವರಿಗೆ ಸಲ್ಲಿಸಲಾಗಿ ಸದರಿಯವರು ಭಾರತ ಸರ್ಕಾರದ ಸಿ.ಜಿ.ಹೆಚ್.ಎಸ್. ದರಪಟ್ಟಿಯು ಇಂಟರ್‌ನೆಟ್‌ನಲ್ಲಿ ಲಭ್ಯವಿದ್ದು, ಅದರಂತೆ ಸಂಸ್ಥೆಯ ಹಂತದಲ್ಲಿಯೇ ಕ್ರಮ ತೆಗೆದುಕೊಳ್ಳಲು ನಿರ್ದೇಶಿಸಿರುತ್ತಾರೆ. ಸದರಿ ನಿರ್ದೇಶನದಂತೆ ಈ ಕೆಳಕಂಡ ಸಿಬ್ಬಂದಿ ವರ್ಗದವರ ವೈದ್ಯಕೀಯ ವೆಚ್ಚದ ಮರುಪಾವತಿಯ ಬಿಲ್ಲುಗಳನ್ನು ಸಂಸ್ಥೆಯ ವೈದ್ಯಕೀಯ ಮಂಡಳಿಯಿಂದ ಪರಿಶೀಲಿಸಿ, ಅರ್ಹ ಮೊತ್ತಕ್ಕೆ ಜಿಲ್ಲಾ ಶಸ್ತ್ರ ಚಿಕಿತ್ಸಕರು ಮೇಲು ಸಹಿಯೊಂದಿಗೆ ದೃಢೀಕರಿಸಿರುವುದನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ವಿಷಯವನ್ನು ಮಂಡಿಸಿದರು. |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ | | | | | |
|---|---|---|---|---|---|---|---|
| | | ಕ್ರಮ ಸಂ | ಹೆಸರು | ನೌಕರರಿಗೆ ರೋಗಿಯ ಸಂಬಂಧ ಹಾಗೂ ವೈದ್ಯಕೀಯ ಚಿಕಿತ್ಸೆ ಪಡೆದ ಆಸ್ಪತ್ರೆ | ಖಾಯಿಲೆಯ ವಿವರ | ಮರು ಪಾವತಿಗಾಗಿ ಸಲ್ಲಿಸಿದ ಮೊತ್ತ | ಪಾವತಿಸಲು ದೃಢೀಕರಿಸಿರುವ ಅರ್ಹ ಮೊತ್ತ |
| | | 1 | ಡಾ. ಶಂಕರ.ಕೆ<br>ವೈದ್ಯಕೀಯಅಧೀಕ್ಷಕರು/<br>ಜಿಲ್ಲಾ ಶಸ್ತ್ರ ಚಿಕಿತ್ಸಕರು | ತಾಯಿಗೆ<br>ಅಗಡಿ ಆಸ್ಪತ್ರೆ, ಬೆಂಗಳೂರು<br>ಪತ್ನಿ ಮತ್ತು ಸ್ವಂತಕ್ಕೆ<br>ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ | CA<br>Renal failure with translate | 31,036–00<br>33,350–00<br>39,538–00<br>11,145–00<br>58,321–00 | 29,789–00<br>32,263–00<br>35,300–00<br>9,922–00<br>56,515–00 |
| | | 2 | ಡಾ.ಮನೋಹರ್. ಎಸ್.ಆರ್<br>ಪ್ರಾಧ್ಯಾಪಕರು | ಪತ್ನಿಗೆ<br>ಗರ್ಭಾವಸ್ಥೆಗೆ ಚಿಕಿತ್ಸೆ<br>ಮಲ್ನಾಡ್ ನರ್ಸಿಂಗ್ ಹೋಂ,<br>ಹಾಸನ. | ಗರ್ಭಾವಸ್ಥೆಗೆ ಚಿಕಿತ್ಸೆ | 11,118–00 | 6,400–00 |
| | | 3 | ಶ್ರೀಮತಿ ಸೋನಿ ಎಂ.ಸಿ.<br>ಶೂಶ್ರೂಷಕಿ | ಸ್ವಂತ<br>ಸೆಂಟ್‌ಜಾನ್ ಮೆಡಿಕಲ್ ಕಾಲೇಜು,<br>ಮೈಸೂರು | CA Breast | 1,656–00<br>1,544–00<br>2,385–00<br>8,822–00 | 1,018–00<br>1,420–00<br>2,285–00<br>7,676–00 |
| | | 4 | ಶ್ರೀಮತಿ ಶಕುಂತಲ. ವೈ.ಎಂ.<br>ಶೂಶ್ರೂಷಕಿ | ಜಯದೇವ ಆಸ್ಪತ್ರೆ, ಬೆಂಗಳೂರು | HTN +DM | 1,747–00 | 1,647–00 |
| | | 5 | ಶ್ರೀಮಹೇಶ್‌ಕುಮಾರ್ ಹೆಚ್.ವಿ<br>ಪ್ರ.ಶಾ.ತಂ. | ಸಿ.ಎಸ್.ಐ. ಆಸ್ಪತ್ರೆ<br>ಹಾಸನ | Extensive Ethmoidal polyposis (ENT) | 23,630–00 | 11,040–00 |
| | | 6 | ಶ್ರೀಮತಿ.ಪಾರ್ವತಮ್ಮಹೆಚ್.ಎನ್<br>ಕಛೇರಿ ಅಧೀಕ್ಷಕರು | ಸ್ವಂತ<br>ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ | ಸಕ್ಕರೆ ಖಾಯಿಲೆ | 2,808–00 | 1,833–00 |
| | | 7 | ಕೆ. ದೇವಯ್ಯ<br>ಸಹಾಯಕಆಡಳಿತಾಧಿಕಾರಿ | ತಾಯಿ<br>ಜನಪ್ರಿಯ ಆಸ್ಪತ್ರೆ | Viral Fever with Theombocytopemia | 42,533–00 | 31,991–00 |
| | | 8 | ವನಿತ ಎನ್.ಎಂ | ಮಗ<br>ರಾಜೀವ್ ಆಸ್ಪತ್ರೆ, ಹಾಸನ | ಉದರ ಹಾಗೂ ಮೂತ್ರಪಿಂಡದ ತೊಂದರೆ | 2,649–00 | 1,718–00 |
| | | 9 | ಶ್ರೀಮತಿ ಜಯಲಕ್ಷ್ಮಮ್ಮ<br>ಎಂ.ಎನ್.<br>ಪ್ರ.ದ.ಸ. | ಸ್ವಂತ<br>ರಾಜೀವ್ ಆಸ್ಪತ್ರೆ, ಹಾಸನ | ಡೆಂಗ್ಯೂ ಜ್ವರ | 11,250–00 | 9,628–00 |
| | | 10 | ಶ್ರೀ .ವಸಂತಕುಮಾರ್<br>ಎಂ.ಎನ್.<br>ಪ್ರ.ದ.ಸ. | ವಿಕ್ರಮ್ ಆಸ್ಪತ್ರೆ,<br>ಮೈಸೂರು | B.P. MPGN, Hypothyroid | 2,329–00<br>2,478–00 | 1,693–00<br>692–00 |
| | | | ಒಟ್ಟು | | | | 2,42,830–00 |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸ್ವಾಯತ್ತ ಸಂಸ್ಥೆಗಳ ಅಧಿಕಾರಿ/ನೌಕರರುಗಳ ವೈದ್ಯಕೀಯ ವೆಚ್ಚ ಮರುಪಾವತಿ ಬಗ್ಗೆ ಸರ್ಕಾರದಿಂದ ಜಾರಿಗೊಳಿಸಿರುವ ನಿರ್ದೇಶನದಂತೆ ಅರ್ಹ ವೈದ್ಯಕೀಯ ವೆಚ್ಚದ ಮರುಪಾವತಿ ಬಾಬ್ತನ್ನು ಲೆಕ್ಕಶೀರ್ಷಿಕೆ 2210-05-105-1-49-103 ರಡಿ ಭರಿಸುವುದೆಂದು ತೀರ್ಮಾನಿಸಿ ಹಾಲಿ ಸಲ್ಲಿಸಿರುವ ವೈದ್ಯಕೀಯ ವೆಚ್ಚದ ಬಿಲ್‌ನ್ನು ಒಪ್ಪಿ ಅನುಮೋದಿಸಲಾಯಿತು. |
| 17 | ಪರಿಷ್ಕೃತ ಅ.ಭಾ.ತಾ. ಪರಿಷತ್‌ನ ವೇತನ ಬಾಂಡ್‌ನಲ್ಲಿ ವೇತನ ಹಂತ ನಿಗದಿಪಡಿಸಿ ಬೋಧಕ ಸಿಬ್ಬಂದಿಗಳಿಗೆ ಪಾವತಿಸಿರುವ ಬಗ್ಗೆ ಮಹಾಲೇಖಪಾಲಕರು, ಕರ್ನಾಟಕವೃತ್ತ, ಬೆಂಗಳೂರು ರವರು ಆಕ್ಷೇಪಣೆ ವ್ಯಕ್ತಪಡಿಸಿರುವ ಬಗ್ಗೆ. | ಸರ್ಕಾರಿ ಆದೇಶ ಸಂಖ್ಯೆ: ಆಕುಕ 04 ಎಮ್.ಎಮ್.ಸಿ. 2010 ಬೆಂಗಳೂರು ದಿನಾಂಕ:16-12-2011 ಆದೇಶದಂತೆ ಸಂಸ್ಥೆಯ ಬೋಧಕ ಸಿಬ್ಬಂದಿಯವರಿಗೆ ದಿನಾಂಕ:01-04-2011ರಂತೆ ಅನ್ವಯಿಸುವಂತೆ ಪರಿಷ್ಕೃತ ವೇತನ ಬಾಂಡ್‌ನಲ್ಲಿ ವೇತನ ಹಂತವನ್ನು ನಿಗದಿಪಡಿಸಿ ವೇತನ ಪಾವತಿ ಮಾಡಲಾಗಿರುತ್ತದೆ. ಮಹಾಲೇಖಪಾಲರು, ಕರ್ನಾಟಕ ವೃತ್ತ, ಬೆಂಗಳೂರುರವರು 2015-16ನೇ ಸಾಲಿನ ಆಡಿಟ್ ವರದಿಯಲ್ಲಿ ವೇತನ ಹಂತವನ್ನು ನಿಗದಿಪಡಿಸುವಾಗ ತಪ್ಪಾಗಿ ನಿಗದಿಮಾಡಲಾಗಿದ್ದು ಕೆಲವೊಂದು ಉದಾಹರಣೆಗಳನ್ನು 18 ಬೋಧಕ ಸಿಬ್ಬಂದಿಗಳ ಹೆಸರುಗಳನ್ನು ಮಾತ್ರ ತೋರಿಸಿ ಇದನ್ನು ಸರಿಪಡಿಸುವಂತೆಯೂ ಹಾಗೂ ಹೆಚ್ಚುವರಿ ಪಾವತಿಯಾಗಿರುವ ಮೊತ್ತವನ್ನು ಕಟಾವಣೆ ಮಾಡಲು ವರದಿಯಲ್ಲಿ ನಮೂದಿಸಿರುತ್ತಾರೆ. ಸದರಿಯವರ ಸೂಚನೆಯಂತೆ ಹೆಚ್ಚುವರಿ ಬಾಬ್ತುಗಳನ್ನು 30 ಕಂತುಗಳಲ್ಲಿ ಕಟಾಯಿಸಲು ಸಂಸ್ಥೆಯಿಂದ ಸುತ್ತೋಲೆ ಹೊರಡಿಸಿದ್ದು, ಸಂಬಂಧಪಟ್ಟ ಬೋಧಕ ಸಿಬ್ಬಂದಿಯವರು ಈ ವಿಷಯದಲ್ಲಿ ಘನ ಉಚ್ಛನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ನಂ. 38568-38572/2017 ರಲ್ಲಿ ದಾವೆ ಹೂಡಿ ತಡೆಯಾಜ್ಞೆಯನ್ನು ತಂದಿರುತ್ತಾರೆ. ಇದಲ್ಲದೆ ಆಡಿಟ್ ವರದಿಯಲ್ಲಿ ನಮೂದಾಗದಿರುವ ಇತರೆ ಸಿಬ್ಬಂದಿ ವರ್ಗದವರಿಗೂ ಈ ನಿಯಮವು ಅನ್ವಯಿಸುತ್ತದೆಯೇ ಎಂಬುದರ ಬಗ್ಗೆ ಜಿಜ್ಞಾಸೆ ಇರುವುದರಿಂದ ಸದರಿ ವಿಷಯದ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ವಿಷಯವನ್ನು ಸಭೆಯಲ್ಲಿ ಮಂಡಿಸಲಾಗಿದೆ ಎಂದು ಸಂಸ್ಥೆಯ ನಿರ್ದೇಶಕರು ತಿಳಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಮಹಾಲೇಖಪಾಲರು, ಕರ್ನಾಟಕ ವೃತ್ತ, ಬೆಂಗಳೂರುರವರು 2015-16ನೇ ಸಾಲಿನ ಆಡಿಟ್‌ನಲ್ಲಿ ಸಂಸ್ಥೆಯಿಂದ ಬೋಧಕ ಸಿಬ್ಬಂದಿಗಳಿಗೆ ಪರಿಷ್ಕೃತ ವೇತನ ಬಾಂಡ್‌ನಲ್ಲಿ ವೇತನ ಹಂತವನ್ನು ನಿಗದಿಪಡಿಸುವಾಗ ತಪ್ಪಾಗಿ ನಿಗದಿಪಡಿಸಿದ್ದು, ಹೆಚ್ಚುವರಿ ಪಾವತಿ ಮಾಡಿರುವ ವೇತನದ ಕಟಾವಣೆಗೆ ಕೆಲವು ಹೆಸರುಗಳನ್ನು ಮಾತ್ರ ಉದಾಹರಣೆಗಾಗಿ ನಮೂದಿಸಿದ್ದರೂ ಸಹ ಈ ಆಕ್ಷೇಪಣೆಯು ಹೆಚ್ಚುವರಿ ವೇತನ ಪಡೆದಿರುವ ಎಲ್ಲಾ ಬೋಧಕ ಸಿಬ್ಬಂದಿಯವರಿಗೆ ಅನ್ವಯಿಸುವುದರಿಂದ ಸಂಬಂಧಪಟ್ಟ ಬೋಧಕ ಸಿಬ್ಬಂದಿವರ್ಗದವರಿಂದ ಹೆಚ್ಚುವರಿಯಾಗಿ ಪಾವತಿಯಾಗಿರುವ ವೇತನ ಬಾಬ್ತನ್ನು ನಿಯಮಾನುಸಾರ ಕಟಾಯಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 18 | ಬೋಧಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರ ಕಛೇರಿ ಕೆಲಸಗಳಿಗೆ ಅನುಕೂಲವಾಗುವಂತೆ ಕಾರು ಖರೀದಿಸುವ ಬಗ್ಗೆ. | ಸಂಸ್ಥೆಯ ಬೋಧಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು, ಕಛೇರಿ ಕೆಲಸಗಳಿಗೆ ತೆರಳಲು ಟಾಟಾ ಸುಮೋ ವಾಹನವು ಉಪಯೋಗಿಸುತ್ತಿದ್ದು ಸದರಿ ವಾಹನವು 1997ರ ಮಾಡೆಲ್‌ನದಾಗಿದ್ದು ಒಟ್ಟು 2,83,759 ಕಿ.ಮೀ. ಚಲಿಸಿರುತ್ತದೆ. ಪ್ರಸ್ತುತ ಈ ವಾಹನವು ಪದೇ ಪದೇ ರಿಪೇರಿ ಬರುತ್ತಿದ್ದು ದುರಸ್ಥಿಗೆ ತುಂಬಾ ವೆಚ್ಚವಾಗುತ್ತಿದ್ದರಿಂದ ಸದರಿ ವಾಹನವನ್ನು ರಿಪೇರಿ ಮಾಡಿಸಿ ಬಳಸಬಹುದೇ ಎಂಬುದರ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಅಭಿಪ್ರಾಯವನ್ನು ಕೇಳಿ ಪತ್ರ ಬರೆಯಲಾಗಿರುತ್ತದೆ.<br>ವಾಹನ ನಿರೀಕ್ಷಕರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಟಾಟಾ ಸುಮೋವಾಹನವನ್ನು ಪರಿಶೀಲಿಸಿ ವಾಹನವು 1997ನೇ ಇಸವಿಯ ಮಾಡೆಲ್‌ನದಾಗಿದ್ದು ಇದು ಸುಮಾರು 20 ವರ್ಷ ಹಳೆಯ ವಾಹನವಾಗಿರುತ್ತದೆ. ವಾಹನದ ಕವಚವು ತುಕ್ಕು ಹಿಡಿದಿರುತ್ತದೆ. ವೈರಿಂಗ್ ಸಿಸ್ಟಂ ಹಾಳಾಗಿರುತ್ತದೆ. ಟ್ರಾನ್ಸ್‌ಮಿಷನ್ ಕೆಟ್ಟಿದ್ದು ಬಹಳ ದುರಸ್ಥಿ ಕಾರ್ಯದ ಅವಶ್ಯಕತೆ ಇರುತ್ತದೆ. ಸದರಿ ವಾಹವನ್ನು ದುರಸ್ಥಿ ಮಾಡಿಸಿ ರಸ್ತೆ ಯೋಗ್ಯವಾಗಿರುವುದು ಆರ್ಥಿಕವಾಗಿ ಸಮಂಜಸವಲ್ಲ ಹಾಗೂ ಕಷ್ಟಕರವಾಗಿರುವುದರಿಂದ ಈ ವಾಹನವನ್ನು ನಿರುಪಯುಕ್ತಗೊಳಿಸಿ ಈ ವಾಹನದ ನೊಂದಾಣಿಯನ್ನು ರದ್ದುಪಡಿಸಲು ಶಿಫಾರಸ್ಸು ಮಾಡಿ ವಾಹನದ ಹರಾಜು ಮೌಲ್ಯ ರೂ.20,000/-ಗಳಿಗೆ ನಿಗದಿಪಡಿಸಿದ್ದು, ಸದರಿ ವರದಿಯನ್ನು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ವಾಹನ ವಿಲೇವಾರಿ ಮಾಡುವ ಬಗ್ಗೆ ಅನುಮತಿ ಕೋರಿ ಈ ಕಛೇರಿ ಪತ್ರ ಸಂಖ್ಯೆ: ಎಸ್.ಸಿ.ಹೆಚ್./ವಾವಿ/34/2017-18, ದಿನಾಂಕ:14-11-2017ರಂದು ಪತ್ರ ಬರೆಯಲಾಗಿದೆ. ಬೋಧಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು, ದಿನಾಂಕ:10-11-2017ರಂದು ಮನವಿ ಸಲ್ಲಿಸಿ ಟಾಟಾ ಸುಮೋವಾಹನವನ್ನು ಬಳಸದೇ ಇರುವುದರಿಂದ ಕಛೇರಿ ಕೆಲಸಗಳ ಅನುಕೂಲಕ್ಕಾಗಿ ಒಂದು ಹೊಸ ವಾಹನವನ್ನು ಖರೀದಿಸಿಕೊಡಬೇಕೆಂದು ಸಲ್ಲಿಸಿದ್ದ ಮನವಿ ಪತ್ರವನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸದ್ಯಕ್ಕೆ ಹೊರಗುತ್ತಿಗೆ ಆಧಾರದಲ್ಲಿ ವಾಹನ ಪಡೆದು ಉಪಯೋಗಿಸಿಕೊಳ್ಳುವಂತೆಯೂ ಹೊಸ ಕಾರು ಖರೀದಿಗೆ ಅನುಮತಿ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 19 | ಸಂಸ್ಥೆಯ e-hospital ತಂತ್ರಾಂಶ ಅಳವಡಿಕೆಯ | ಸರ್ಕಾರವು ರಾಜ್ಯದ ಎಲ್ಲಾ ಆಸ್ಪತ್ರೆಗಳು ಹಾಗೂ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು e-hospital ಆಗಿ ಪರಿವರ್ತಿಸಲು NIC ಸಂಸ್ಥೆಯ ಮೂಲಕ ಸಾಫ್ಟ್‌ವೇರ್ ಅಳವಡಿಸಿಕೊಂಡು ಆಸ್ಪತ್ರೆಯ |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ಕಾರ್ಯನಿರ್ವಹಣೆಗೆ ತಾಂತ್ರಿಕ ಪರಿಣಿತರನ್ನು ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವ ಬಗ್ಗೆ. | ಪೂರ್ಣ ಕಾರ್ಯನಿರ್ವಹಣೆಯನ್ನು ಗಣಕೀಕೃತಗೊಳಿಸಲು ಆಯಾ ಸಂಸ್ಥೆಯ ಮುಖ್ಯಸ್ಥರಗಳಿಗೆ ಅಗತ್ಯ ಕ್ರಮವಹಿಸುವಂತೆ ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ ಹಿಮ್ಸ್ ಸಂಸ್ಥೆಯ ಆಸ್ಪತ್ರೆ ಮತ್ತು ಕಾಲೇಜು ವಿಭಾಗಗಳನ್ನು ಹಂತ–ಹಂತವಾಗಿ ಗಣಕೀಕೃತಗೊಳಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ.<br>e-hospital ಸಾಫ್ಟ್‌ವೇರ್ ಅಳವಡಿಕೆಯ ವ್ಯವಸ್ಥೆಯನ್ನು ನಿರ್ವಹಿಸಿಕೊಂಡು ಹೋಗಲು ಒಬ್ಬ ತಾಂತ್ರಿಕ ತಜ್ಞರ ಅವಶ್ಯಕತೆ ಇದ್ದು ಸಂಸ್ಥೆಯಲ್ಲಿ ಪ್ರಸ್ತುತ ಶ್ರೀ.ಮನೋಹರ್.ಎಂ. ಟೆಲಿಮೆಡಿಸನ್, ಇವರು ಎನ್.ಆರ್.ಹೆಚ್.ಎಮ್. ಯೋಜನೆಯಡಿ ನೇಮಕಗೊಂಡು ತದನಂತರ ವಿಕಾಸ್ ಗ್ಲೋಬಲ್ ಸಲ್ಯೂಷನ್ ಸಂಸ್ಥೆಯಿಂದ ಹೊರಗುತ್ತಿಗೆ ಆಧಾರದಲ್ಲಿ, ಹಿಮ್ಸ್ ಸಂಸ್ಥೆಯಲ್ಲಿ ಟೆಲಿ ಮೆಡಿಸನ್ ತಾಂತ್ರಿಕ ನಿರ್ವಹಣೆ ಕೆಲಸವನ್ನು ನಿರ್ವಹಿಸುವುದರ ಜೊತೆಗೆ ಆಸ್ಪತ್ರೆಯ ನೆಟ್‌ವರ್ಕಿಂಗ್, ಸಿಟಿ ಸ್ಕ್ಯಾನ್ ಮತ್ತು ಸಿ.ಆರ್. ಉಪಕರಣಗಳ ನೆಟ್‌ವರ್ಕಿಂಗ್, ಎನ್.ಕೆ.ಎನ್. ಅಂತರರ್ಜಾಲದ ನಿರ್ವಹಣೆ, ಡಿಜಿಟಲ್ ಲೈಬ್ರರಿ ಮೇಲ್ವಿಚಾರಣೆ ಎಮ್.ಆರ್.ಡಿ. ಡಿಜಿಟಲೈಸೇಷನ್ ನಿರ್ವಹಣೆ, ಸಾಫ್ಟ್‌ವೇರ್ ಟೆಂಡರ್ ನಿರ್ವಹಣೆ ಮೇಲ್ವಿಚಾರಣೆಯನ್ನು ನಿರ್ವಹಿಸುತ್ತಿದ್ದು, ಪ್ರೋಗ್ರಾಮರ್/ಆಪರೇಷನಲ್ ಮ್ಯಾನೇಜರ್ ಆಗಿ ಹಿಮ್ಸ್ ಸಂಸ್ಥೆಗೆ ನೇಮಕಮಾಡಿಕೊಳ್ಳುವಂತೆ ಮನವಿ ಸಲ್ಲಿಸಿರುತ್ತಾರೆಂದು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ವಿಷಯವನ್ನು ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಂಸ್ಥೆಯ ಎಲ್ಲಾ ಕಾರ್ಯಚಟುವಟಿಕೆಗಳನ್ನು ಗಣಕೀಕೃತಗೊಳಿಸಲು ಒಬ್ಬರು ತಂತ್ರಜ್ಞರ ಅವಶ್ಯಕತೆ ಇರುವುದನ್ನು ಒಪ್ಪಿ ಸಂಸ್ಥೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶ್ರೀ.ಮನೋಹರ್.ಎಂ.ರವರು ಸದರಿ ಹುದ್ದೆಗೆ ಅರ್ಹ ವಿದ್ಯಾರ್ಹತೆ ಮತ್ತು ಅನುಭವವನ್ನು ಹೊಂದಿರುವುದರಿಂದ ಹಿಮ್ಸ್ ಸಂಸ್ಥೆಗೆ ಪ್ರೋಗ್ರಾಮರ್ /ಆಪರೇಷನಲ್ ಮ್ಯಾನೇಜರ್ ಆಗಿ 11 ತಿಂಗಳ ಅವಧಿಗೆ ತಾತ್ಕಾಲಿಕವಾಗಿ ನೇಮಕಮಾಡಿಕೊಂಡು ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಕರ್ನಾಟಕ ಸರ್ಕಾರವು ಪ್ರೋಗ್ರಾಮರ್ /ಆಪರೇಷನಲ್ ಮ್ಯಾನೇಜರ್ ಹುದ್ದೆಗೆ ನಿಗದಿಪಡಿಸಿರುವ ಸಂಚಿತ ವೇತನ ರೂ.29,000/–ಗಳನ್ನು (NHM/HEQ/H/20/2016-17, ದಿನಾಂಕ: 21–12–2016) ಸಂಸ್ಥೆಯ ಯೂಸರ್ಸ್ ನಿಧಿಯಿಂದ ಪಾವತಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 20 | ಶ್ರೀ.ಪಂಚಾಕ್ಷರಿ, ನಿವೃತ್ತ ಉಪನಿರ್ದೇಶಕರು, ಇವರನ್ನು ಆರ್ಥಿಕ ಅಧಿಕಾರಿಗಳನ್ನಾಗಿ ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವ ಬಗ್ಗೆ. | ಶ್ರೀ.ಪಂಚಾಕ್ಷರಿ, ನಿವೃತ್ತ ಉಪನಿರ್ದೇಶಕರು, ಇವರು ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯಲ್ಲಿ ನೇಮಕಾತಿ ಹೊಂದಿ ಕರ್ನಾಟಕ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಅಂದರೆ ಗ್ರಾಮೀಣಾಭಿವೃದ್ಧಿ ಇಲಾಖೆ/ ಲೋಕೋಪಯೋಗಿ ಇಲಾಖೆ/ ಸಣ್ಣ ನೀರಾವರಿ ಇಲಾಖೆ/ ಭಾರೀ ನೀರಾವರಿ ಇಲಾಖೆ/ ರಾಷ್ಟ್ರೀಯ ಹೆದ್ದಾರಿಗಳ ಇಲಾಖೆ/ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ ದಾವಣಗೆರೆ ಮಹಾನಗರ ಪಾಲಿಕೆಗಳಲ್ಲಿ ನಿಯೋಜನೆ ಮೇರೆಗೆ 34 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ, ದಿನಾಂಕ:31-05-2016ರಂದು ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಬೆಂಗಳೂರು, ಇವರ ಕಛೇರಿಯಲ್ಲಿ ಉಪನಿರ್ದೇಶಕನಾಗಿ ಸೇವಾ ನಿವೃತ್ತಿ ಹೊಂದಿರುತ್ತಾರೆ. ಇವರು ಹಾಸನ ನಗರದಲ್ಲಿ ವಾಸಿಸುತ್ತಿದ್ದು ದೈಹಿಕವಾಗಿ, ಮಾನಸಿಕವಾಗಿ ಹಾಗೂ ಆರೋಗ್ಯದಲ್ಲಿಯೂ ದೃಢಕಾಯ ಸ್ಥಿತಿಯಲ್ಲಿದ್ದು ಇನ್ನೂ ಹಲವಾರು ವರ್ಷಗಳ ಕಾಲ ಕಾರ್ಯನಿರ್ವಹಿಸುವ ಶಕ್ತಿಯಿರುವುದರಿಂದ ಹಿಮ್ಸ್ ಸಂಸ್ಥೆಯಲ್ಲಿ ಖಾಲಿ ಇರುವ ಹಣಕಾಸು ಅಧಿಕಾರಿಯಾಗಿ ಹೊರಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಡಬೇಕೆಂದು ಸಲ್ಲಿಸಿದ್ದ ಮನವಿ ಪತ್ರವನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿ ಜೊತೆಗೆ ಹಿಮ್ಸ್ ಸಂಸ್ಥೆಯಲ್ಲಿ ಒಂದು ಆರ್ಥಿಕ ಅಧಿಕಾರಿ ಹುದ್ದೆಯು ಮಂಜೂರಾಗಿದ್ದು ಪ್ರಸ್ತುತ ಖಾಲಿ ಉಳಿದಿರುತ್ತದೆ. ಖಾಲಿ ಇರುವ ಹುದ್ದೆಗೆ ಆರ್ಥಿಕ ಅಧಿಕಾರಿಯನ್ನು ನೇಮಕ ಮಾಡಿಕೊಳ್ಳುವಂತೆ ಸರ್ಕಾರಕ್ಕೆ ಹಲವಾರು ಭಾರಿ ಮನವಿ ಸಲ್ಲಿಸಲಾಗಿದ್ದರೂ, ಈ ಹುದ್ದೆಯು ಭರ್ತಿಯಾಗದೆ ಖಾಲಿಯೇ ಉಳಿದಿರುತ್ತದೆ. ಸಂಸ್ಥೆಯ ದೈನಂದಿನ ಲೆಕ್ಕ-ಪತ್ರಗಳ ನಿರ್ವಹಣೆ, ಸರ್ಕಾರಕ್ಕೆ ವಿವಿಧ ಸಮಯಗಳಲ್ಲಿ ಸಲ್ಲಿಸಬೇಕಾದ ಆರ್ಥಿಕ ಯೋಜನೆಗಳು, ಟೆಂಡರ್, ಆಯಾ-ವ್ಯಯಾ ಮುಂಗಡ ಪತ್ರ ತಯಾರಿಸುವುದು, ಲೆಕ್ಕ-ಪತ್ರಗಳ ಪರಿಶೋಧನೆಯ ನಿಟ್ಟಿನಲ್ಲಿ ಆರ್ಥಿಕ ಅಧಿಕಾರಿಗಳ ಸಲಹೆ ಮತ್ತು ಮಾಗದರ್ಶನವು ಸಂಸ್ಥೆಯ ಆಡಳಿತ ಹಿತದೃಷ್ಟಿಯಿಂದ ಅತಿಅವಶ್ಯಕವಾಗಿರುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯ ಅವಗಾಹನೆಗೆ ತಂದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ದಿನಾಂಕ: 30-08-2016ರಂದು 15ನೇ ಆರ್ಥಿಕ ಸಮಿತಿ ಸಭೆಯಲ್ಲಿ ಸಂಸ್ಥೆಯ ಲೆಕ್ಕ-ಪತ್ರಗಳನ್ನು ಕ್ರಮಬದ್ಧವಾಗಿ ನಿಗದಿತ ಅವಧಿಯಲ್ಲಿ ನಿರ್ವಹಿಸಲು ಅನುಕೂಲವಾಗುವಂತೆ ಆಂತರೀಕ ಲೆಕ್ಕ-ಪರಿಶೋಧಕರ ಅವಶ್ಯಕತೆ ಇರುವುದರಿಂದ ಅಕೌಂಟೆಂಟ್ ಜನರಲ್ (ಕರ್ನಾಟಕ ವೃತ್ತ), ಬೆಂಗಳೂರು, ಇಲ್ಲಿನ ನಿವೃತ್ತ ಲೆಕ್ಕ-ಪರಿಶೀಲನಾಧಿಕಾರಿಗಳ ಅಸೋಶಿಯೇಷನ್, ಬೆಂಗಳೂರು ಇವರನ್ನು ಸಂಪರ್ಕಿಸಿ, ಅಸೋಶಿಯೇಷನ್‌ರವರು ಆಡಿಟ್ ಮಾಡಲು ಒಪ್ಪಿದ್ದಲ್ಲಿ ಅವರನ್ನು ನೇಮಕ |



ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಮಾಡಿಕೊಳ್ಳಬಹುದು ಅಥವಾ ಸ್ಥಳೀಯವಾಗಿ ಹೆಚ್ಚು ಅನುಭವ ಇರುವಂತಹ ಚಾರ್ಟೆಡ್ ಅಕೌಂಟೆಂಟ್‌ರವರನ್ನು ಸಂಸ್ಥೆಯ ಆಂತರಿಕ ಲೆಕ್ಕ-ಪತ್ರಗಳ ನಿರ್ವಹಣೆಗೆ ನೇಮಕ ಮಾಡಿಕೊಂಡು ಗೌರವಧನವಾಗಿ ಮಾಸಿಕ ರೂ.15,000/- ಪಾವತಿಸುವುದೆಂದು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ಶ್ರೀ.ಪಂಚಾಕ್ಷರಿ, ನಿವೃತ್ತ ಉಪನಿರ್ದೇಶಕರು, ಇವರನ್ನು ಹೊರಗುತ್ತಿಗೆ ಆಧಾರದಲ್ಲಿ ಆರ್ಥಿಕ ಸಲಹೆಗಾರರನ್ನಾಗಿ (ಚೆಕ್ ಸಹಿಯನ್ನು ಹೊರತುಪಡಿಸಿ) ತಾತ್ಕಾಲಿಕವಾಗಿ 11 ತಿಂಗಳ ಅವಧಿಗೆ ನೇಮಕ ಮಾಡಿಕೊಳ್ಳುವುದೆಂದು ತೀರ್ಮಾನಿಸಲಾಯಿತು.<br>ಮುಂದುವರೆದು ಹಾಸನದ ಯಾವುದಾದರೂ ಇಲಾಖೆಗಳಲ್ಲಿ State Accounts Departments ನಿಂದ ನಿಯೋಜನೆಗೊಂಡು ಆರ್ಥಿಕ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವಂತವರ ಹೆಸರನ್ನು ಹಿಮ್ಸ್ ಸಂಸ್ಥೆಗೆ ಹೆಚ್ಚುವರಿಯಾಗಿ ಆರ್ಥಿಕ ಅಧಿಕಾರಿಗಳನ್ನಾಗಿ ನಿಯೋಜನೆ ಮಾಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 21 | ಹಿಮ್ಸ್ ಸಂಸ್ಥೆಯ ಶ್ರೀ ಚಾಮರಾಜೇಂದ್ರ ಆಸ್ಪತ್ರೆಯ ಎಸ್.ಎನ್.ಸಿ.ಯು. ಘಟಕ-1 ಮತ್ತು ಘಟಕ-2 ಅನ್ನು ವಿಸ್ತರಿಸುವುದು ಮತ್ತು ಸ್ಟೆಪ್‌ಡೌನ್ ಮಾಡುವ ರಿಪೇರಿ ಕಾಮಗಾರಿ ಕೈಗೊಂಡಿರುವ ಬಗ್ಗೆ. | ಸಂಸ್ಥೆಯ ಶ್ರೀ ಚಾಮರಾಜೇಂದ್ರ ಆಸ್ಪತ್ರೆಯ ಎಸ್.ಎನ್.ಸಿ.ಯು ವಿಭಾಗದಲ್ಲಿ ಮಕ್ಕಳ ದಾಖಲಾತಿ ದಿನದಿಂದ ದಿನಕ್ಕೆ ಹೆಚ್ಚಾಗಿದ್ದು, ಕೆಲವೊಮ್ಮೆ ಒಂದೇ ವಾರ್ಮರ್‌ನಲ್ಲಿ, ಒಂದಕ್ಕಿಂತ ಹೆಚ್ಚಿನ ಮಕ್ಕಳನ್ನು ಇಡಬೇಕಾದ ಸಂದರ್ಭಗಳು ಬರುತ್ತಿದ್ದ ಹಿನ್ನೆಲೆಯಲ್ಲಿ ಬಡಮಕ್ಕಳ ಚಿಕಿತ್ಸಾ ಹಿತದೃಷ್ಟಿಯಿಂದ ಎಸ್.ಎನ್.ಸಿ.ಯು. ಘಟಕವನ್ನು ವಿಸ್ತರಿಸುವುದರ ಜೊತೆಗೆ ಸ್ಟೆಪ್‌ಡೌನ್ ಎಸ್.ಎನ್.ಸಿ.ಯು ಅನ್ನು ಅತೀ ಶೀಘ್ರವಾಗಿ ಮಾಡಿಸಿಕೊಡಬೇಕೆಂದು ವಿಭಾಗದ ಮುಖ್ಯಸ್ಥರು ಸಲ್ಲಿಸಿದ್ದ ಮನವಿಯಂತೆ ಸಂಸ್ಥೆಯ 16ನೇ ಆರ್ಥಿಕ ಸಮಿತಿ ಸಭೆಯಲ್ಲಿ ವಿಷಯವನ್ನು ಮಂಡಿಸಿ ರೂ.21.00 ಲಕ್ಷಗಳ ವೆಚ್ಚದಲ್ಲಿ ಸದರಿ ಕಾಮಗಾರಿಯನ್ನು ಕೆ.ಹೆಚ್.ಎಸ್.ಡಿ.ಆರ್.ಪಿ ಇಲಾಖೆಯಿಂದ ಕೈಗೊಳ್ಳುವುದೆಂದು ತೆಗೆದುಕೊಂಡ ತೀರ್ಮಾನವನ್ನು 29ನೇ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿತ್ತು.<br>ರಾಜ್ಯದಾದ್ಯಂತ ಶಿಶು ಮರಣಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಎಲ್ಲಾ ಆಸ್ಪತ್ರೆಗಳು ಮತ್ತು ವೈದ್ಯಕೀಯ ಸ್ವಾಯತ್ತ ಸಂಸ್ಥೆಗಳು ಶಿಶು ಮರಣಗಳ ಸಂಖ್ಯೆ ಹೆಚ್ಚಾಗದಂತೆ ಎಲ್ಲಾ ವ್ಯವಸ್ಥೆಗಳನ್ನು ಅಳವಡಿಸಿಕೊಂಡು ಸೂಕ್ತ ಚಿಕಿತ್ಸೆಗೆ ಅವಕಾಶ ಮಾಡಿಕೊಳ್ಳುವಂತೆ ನಿರ್ದೇಶನ ನೀಡಿರುತ್ತದೆ. ಈ ನಡುವೆ ಹಿಮ್ಸ್ ಸಂಸ್ಥೆಯಲ್ಲಿ ಶಿಶು ಮರಣಗಳ ಸಂಖ್ಯೆ ಹೆಚ್ಚಾಗಿರುತ್ತದೆಂಬ ಸುದ್ದಿಯು ದಿನಪತ್ರಿಕೆಗಳಲ್ಲಿ ಪ್ರಕಟವಾದ ಹಿನ್ನೆಲೆಯಲ್ಲಿ |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನರವರು ಈ ವಿಷಯದ ಬಗ್ಗೆ ಕೂಡಲೇ ಕ್ರಮವಹಿಸಿ ದಿನಾಂಕ:14–11–2017ರ ಒಳಗೆ ಎಸ್.ಎನ್.ಸಿ.ಯು. ಘಟಕದ ಬಗ್ಗೆ ವಾಸ್ತವಿಕ ವರದಿ ಸಲ್ಲಿಸುವಂತೆ ದಿನಾಂಕ:14–09–2017ರಂದು ನಿರ್ದೇಶಿಸಿದ್ದರಿಂದ ಸದರಿ ಕಾಮಗಾರಿಯ ಬಗ್ಗೆ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿ ಸದರಿ ಕಾಮಗಾರಿಗಳಲ್ಲಿರುವ ಕೆಲಸಗಳು ವಿವಿಧ ರೀತಿಯ ಕಾಮಗಾರಿಗಳಾಗಿರುವುದರಿಂದ ಒಂದೇ ಟೆಂಡರ್‌ನ ಅಡಿ ಕಾಮಗಾರಿ ಕೈಗೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಿದ್ದರಿಂದ ಸದರಿ ಕಾಮಗಾರಿಯನ್ನು ಅತಿ ಅವಶ್ಯಕವಾಗಿ ಕೈಗೊಳ್ಳಲೇ ಬೇಕಾಗಿದ್ದ ಹಿನ್ನೆಲೆಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ವಿಂಗಡಿಸಿ ಕೆ.ಹೆಚ್.ಎಸ್.ಡಿ.ಆರ್.ಪಿ ಹಾಗೂ ಲೋಕೋಪಯೋಗಿ ಇಲಾಖೆಯಿಂದ ಕಾಮಗಾರಿಗಳನ್ನು ಕೈಗೊಂಡಿರುವುದಕ್ಕೆ ಅನುಮೋದನೆ ಪಡೆಯುವ ಪ್ರಸ್ತಾವನೆಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು. |

| ಕ್ರಸಂ | ಕಾಮಗಾರಿಯ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | Essential repairs and renovation works at SNCU unit-1 at Sri Chamarajendra Hospital at Hassan | 2.50 |
| 2 | Essential repairs and renovation works at SNCU unit-2 at Sri Chamarajendra Hospital at Hassan | 2.50 |
| 3 | Essential flooring and other works of SNCU unit at Sri Chamarajendra Hospital at Hassan | 4.95 |
| 4 | Essential electrical repair works of SNCU unit at Sri Chamarajendra Hospital at Hassan | 4.92 |
| 5 | ಹಿಮ್ಸ್ ಸಂಸ್ಥೆಯ ಶ್ರೀ ಚಾಮರಾಜೇಂದ್ರ ಆಸ್ಪತ್ರೆಯ ಸ್ಟೆಪ್ ಡೌನ್ ಹಾಗೂ ಎಸ್.ಎನ್.ಸಿ.ಯು.ಗೆ ತ್ರಿಫೇಸ್ ವಿದ್ಯುತ್ ಸಂಪರ್ಕ ಮತ್ತು ಇತರೆ ಕಾಮಗಾರಿಗಳ ಕೆಲಸ (ಲೋಕೋಪಯೋಗಿ) | 3.65 |
| | ಒಟ್ಟು | **18.52** |

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಮೇಲೆ ವಿವರಿಸಿರುವ ಕಾಮಗಾರಿಗಳು ಎಸ್.ಎನ್.ಸಿ.ಯು. ಘಟಕಕ್ಕೆ ಬರುವ ಮಕ್ಕಳ ಚಿಕಿತ್ಸೆಗೆ ಸದರಿ ಕಾಮಗಾರಿಯು ಅತಿ ತುರ್ತು ಅವಶ್ಯಕವಾಗಿರುವುದರಿಂದ ಹಾಗೂ 16ನೇ ಆರ್ಥಿಕ ಸಮಿತಿ ಸಭೆಯಲ್ಲಿ ಹಾಗೂ 29ನೇ ಆಡಳಿತ ಮಂಡಳಿ



ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

<table>
<tr><th>ಅಜೆಂಡಾ ಕ್ರಮ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td>ಸಭೆಯಲ್ಲಿ ಅನುಮೋದನೆಯಾಗಿರುವುದರಿಂದ ಸದರಿ ಕಾಮಗಾರಿಗಳ ಪೈಕಿ ಕ್ರಮ ಸಂಖ್ಯೆ 1 ರಿಂದ 4ರ ವರೆಗಿನ ಕಾಮಗಾರಿಗಳನ್ನು ಕೆ.ಹೆಚ್.ಎಸ್.ಡಿ.ಆರ್.ಪಿ ಇಲಾಖೆ ಮತ್ತು ಕ್ರಮ ಸಂಖ್ಯೆ: 5ರ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯ ಮುಖಾಂತರ ಕೈಗೊಂಡಿರುವುದರಿಂದ ಸರ್ವಾನುಮತದಿಂದ ಒಪ್ಪಿ ಸದರಿ ಕಾಮಗಾರಿಯ ವೆಚ್ಚ ರೂ.18.50 ಲಕ್ಷಗಳನ್ನು ವೆಚ್ಚವನ್ನು ಸಂಸ್ಥೆಯ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ತೀರ್ಮಾನಿಸಲಾಯಿತು.</td></tr>
<tr><td>22</td><td>ಬೋಧಕ ಆಸ್ಪತ್ರೆಗೆ ಚಿಕಿತ್ಸೆಗೆ ಬರುವ ಅಂಗವಿಕಲರು ಹಾಗೂ ತುರ್ತು ಚಿಕಿತ್ಸಾ ರೋಗಿಗಳು ತೆರಳಲು ಅನುಕೂಲವಾಗುವಂತೆ ರ್‍ಯಾಂಪ್‌ಅಳವಡಿಸುವ ಕಾಮಗಾರಿ ಬಗ್ಗೆ.</td><td>ಸಂಸ್ಥೆಯ ಬೋಧಕ ಆಸ್ಪತ್ರೆಗೆ ಚಿಕಿತ್ಸೆ ಬರುವ ಅಂಗವಿಕಲರು ಮತ್ತು ತುರ್ತು ಚಿಕಿತ್ಸಾ ಘಟಕಕ್ಕೆ ಬರುವ ರೋಗಿಗಳು ತೆರಳಲು ರ್‍ಯಾಂಪ್ ವ್ಯವಸ್ಥೆ ಇಲ್ಲದೆ ಇರುವುದರಿಂದ ರೋಗಿಗಳಿಗೆ ಅನಾನುಕೂಲವಾಗಿರುತ್ತದೆ. ಆದುದರಿಂದ ಹೊಸ ಆಸ್ಪತ್ರೆ ಹಾಗೂ ಹಳೆಯ ಆಸ್ಪತ್ರೆಗೆ ರೋಗಿಗಳು ತೆರಗಳು ಅನುಕೂಲವಾಗುವಂತೆ ಸ್ಟೀಲ್ ರ್‍ಯಾಂಪ್ ಅಳವಡಿಸಲು ಸಲ್ಲಿಸಿದ ಕೆಳಕಂಡ ಅಂದಾಜು ಪಟ್ಟಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br><table><tr><th>ಕ್ರಮ ಸಂಖ್ಯೆ</th><th>ಸ್ಥಳ</th><th>ಕಾಮಗಾರಿ ವಿವರ</th><th>ಅಂದಾಜು ವೆಚ್ಚ</th></tr><tr><td>1</td><td>ಹೊಸ ಬೋಧಕ ಆಸ್ಪತ್ರೆ</td><td>ಹೊಸ ಆಸ್ಪತ್ರೆ ಕಟ್ಟಡದ ದಕ್ಷಿಣಾಭಿಮುಖವಾಗಿ ನಿರ್ಮಿಸಿರುವ ದ್ವಾರದಿಂದ ತುರ್ತುಚಿಕಿತ್ಸಾ ವಿಭಾಗಕ್ಕೆ ತೆರಳಲು ಮತ್ತು ಪೂರ್ವಭಿಮುಖವಾಗಿ ನಿರ್ಮಿಸಿರುವ ಮುಖ್ಯದ್ವಾರದಿಂದ ಅಂಗವಿಕಲ ಹಾಗೂ ಇತರೆ ರೋಗಿಗಳು ತೆರಳಲು ಅನುಕೂಲವಾಗುವಂತೆ ಪ್ಲಾಟ್ ಫಾರಂ ನಿರ್ಮಿಸಿ ರೈಲಿಂಗ್ಸ್ ಅಳವಡಿಸುವ ಸ್ಟೀಲ್ ಕಾಮಗಾರಿ.</td><td>3,31,750.00</td></tr><tr><td>2</td><td>ಶ್ರೀ ಚಾಮರಾಜೇಂದ್ರ ಬೋಧಕ ಆಸ್ಪತ್ರೆ</td><td>ಹೊಸ ಆಸ್ಪತ್ರೆ ಕಟ್ಟಡದಿಂದ ಹಳೆ ಆಸ್ಪತ್ರೆ ಕಟ್ಟಡಕ್ಕೆ ಸ್ಥಳಾಂತರಗೊಳ್ಳುವ ರೋಗಿಗಳು ನೆಲ ಅಂತಸ್ತಿನಿಂದ ಮೊದಲನೇ ಮಹಡಿಗೆ ತೆರಳಲು ಅನುಕೂಲವಾಗುವಂತೆ ಪ್ಲಾಟ್ ಫಾರಂ ನಿರ್ಮಿಸಿ ರೈಲಿಂಗ್ಸ್ ಅಳವಡಿಸುವ ಸ್ಟೀಲ್ ಕಾಮಗಾರಿ.</td><td>1,61,000.00</td></tr></table><br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ರೋಗಿಗಳ ಹಿತದೃಷ್ಟಿಯಿಂದ ಮೇಲ್ಕಂಡ ಕಾಮಗಾರಿಗಳು ಅತಿ ಅವಶ್ಯಕವಾಗಿರುವುದರಿಂದ ಒಪ್ಪಿ ಸದರಿ ಕಾಮಗಾರಿಯ ವೆಚ್ಚವನ್ನು ಆಸ್ಪತ್ರೆಯ ಯೂಸರ್ಸ್ ನಿಧಿಯಿಂದ ಪಾವತಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.</td></tr>
<tr><td>23</td><td>ಹಿಮ್ಸ್ ಸಂಸ್ಥೆಯ ಕಾಲೇಜು ಕಟ್ಟಡದಲ್ಲಿ ಅಳವಡಿಸಿರುವ</td><td>ಸಂಸ್ಥೆಯ ಕಾಲೇಜು ಕಟ್ಟಡ ನಿರ್ಮಾಣದ ಸಂದರ್ಭದಲ್ಲಿ ಮಳೆ ನೀರು ಹರಿದು ಹೋಗಲು ಅನುಕೂಲವಾಗುವಂತೆ ಡಕ್ಟ್‌ಗಳನ್ನು ನಿರ್ಮಿಸಲಾಗಿದ್ದು, ಡಕ್ಟ್‌ನಲ್ಲಿ ಅಳವಡಿಸಿರುವ ಪೈಪ್‌ಗಳು ಒಡೆದು</td></tr>
</table>

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

<table>
<tr><th>ಅಜೆಂಡಾ ಕ್ರಮ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td>ಡಕ್ಟ್‌ಗಳು ಹಾಳಾಗಿದ್ದು, ಮಳೆ ನೀರು ಗೋಡೆಗಳಿಗೆ ಹರಿದು ಗೋಡೆಗಳು ಶಿಥಿಲವಾಗುತ್ತಿರುವುದರಿಂದ ಡಕ್ಟ್ ರಿಪೇರಿ ಕಾಮಗಾರಿ ಬಗ್ಗೆ.</td><td>ಹೋಗಿರುವುದರಿಂದ ಮಳೆ ನೀರು ಸರಿಯಾಗಿ ಡಕ್ಟ್‌ಗಳ ಮುಖಾಂತರ ಹರಿಯದೆ ಗೋಡೆಗಳು ಮತ್ತು ಲಿಫ್ಟ್ ರೂಂಗಳಿಗೆ ನೀರು ಹರಿದು ಗೋಡೆಗಳು ಶಿಥಿಲಗೊಳ್ಳುತ್ತಿರುವುದರಿಂದ ಉಪನ್ಯಾಸಕ ಕೊಠಡಿಗಳಿಗೆ ಹೊಸದಾಗಿ ಅಳವಡಿಸಿರುವ ಅಕಾಸ್ಟಿಕ್ ಹಾಳಾಗುವುದರ ಜೊತೆಗೆ ವಿದ್ಯುತ್ ಸರಬರಾಜಿನ ವೈರ್‌ಗಳಲ್ಲಿ ಆಗಾಗ್ಗೆ ಶಾರ್ಟ್ ಸರ್‌ಕ್ಯೂಟ್ ಆಗುತ್ತಿರುವುದು ಕಂಡು ಬಂದಿದ್ದರಿಂದ ಸದರಿ ಕಾಮಗಾರಿಯನ್ನು ಕೈಗೊಳ್ಳಲು ತಗುಲುವ ವೆಚ್ಚಕ್ಕೆ ಅಂದಾಜು ಪಟ್ಟಿ ಸಲ್ಲಿಸುವಂತೆ ಲೋಕೋಪಯೋಗಿ ಇಲಾಖೆಯವರನ್ನು ಕೋರಲಾಗಿದ್ದು, ಸದರಿಯವರು ಸಲ್ಲಿಸಿದ್ದ ಕೆಳಕಂಡ ಅಂದಾಜು ಪಟ್ಟಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.
<table>
<tr><th>ಕ್ರ ಸಂ</th><th>ಕಾಮಗಾರಿಯ ವಿವರ</th><th>ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)</th></tr>
<tr><td>1</td><td>ಹಿಮ್ಸ್ ಸಂಸ್ಥೆಯ ಕಾಲೇಜು ಕಟ್ಟಡದಲ್ಲಿ ಅಳವಡಸಿರುವ ಡಕ್ಟ್‌ಗಳು ಹಾಳಾಗಿದ್ದು, ಮಳೆ ನೀರು ಗೋಡೆಗಳಿಗೆ ಹರಿದು ಗೋಡೆಗಳು ಶಿಥಿಲವಾಗುತ್ತಿರುವುದನ್ನು ರಿಪೇರಿ ಕಾಮಗಾರಿ ಕೈಗೊಳ್ಳುವ ಬಗ್ಗೆ.</td><td>4.85</td></tr>
</table>
ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಉಪನ್ಯಾಸಕ ಕೊಠಡಿಗಳ ಅಕಾಸ್ಟಿಕ್ ಹಾಗೂ ವಿದ್ಯುತ್‌ಚ್ಛಕ್ತಿ ವೈರುಗಳ ಸಂರಕ್ಷಣೆಯ ಹಿತದೃಷ್ಟಿಯಿಂದ ಸದರಿ ಕಾಮಗಾರಿಯು ಅತಿ ಅವಶ್ಯವೆಂದು ಒಪ್ಪಿ ಸದರಿ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡು ವೆಚ್ಚವನ್ನು ಸಿವಿಲ್ ಲೆಕ್ಕ ಶೀರ್ಷಿಕೆ 4210–03–105–1–02–386 ರಡಿಯಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.</td></tr>
<tr><td>24</td><td>ಹಿಮ್ಸ್ ಸಂಸ್ಥೆಯ ಆವರಣದಲ್ಲಿ ಎಲ್.ಇ.ಡಿ. ಹೈ ಮಾಸ್ಟ್ ಲೈಟ್ ಅಳವಡಿಸುವ ಕಾಮಗಾರಿ ಬಗ್ಗೆ.</td><td>ಸಂಸ್ಥೆಯ ಹೊಸ ಆಸ್ಪತ್ರೆ ಕಟ್ಟಡ, ಹಳೆ ಆಸ್ಪತ್ರೆ ಕಟ್ಟಡ ಹಾಗೂ ಕಾಲೇಜು ಕಟ್ಟಡದ ಮಧ್ಯಭಾಗದಲ್ಲಿರುವ ರಸ್ತೆಯಲ್ಲಿ ವಿದ್ಯಾರ್ಥಿಗಳು, ಸಿಬ್ಬಂದಿವರ್ಗದವರು, ರೋಗಿಗಳು, ಮತ್ತು ಸಾರ್ವಜನಿಕರು ಒಂದು ಕಟ್ಟಡದಿಂದ ಮತ್ತೊಂದು ಕಟ್ಟಡಕ್ಕೆ ಸಂಚಾರಿಸುವ ರಸ್ತೆಯಾಗಿದ್ದು, ಸದರಿ ಸ್ಥಳದಲ್ಲಿ ಬೆಳಕಿನ ವ್ಯವಸ್ಥೆ ಇಲ್ಲದೆ ಇರುವುದರಿಂದ ರಾತ್ರಿವೇಳೆ ರಸ್ತೆಯಲ್ಲಿ ಸಂಚರಿಸಲು ಕಷ್ಟಕರವಾಗಿರುತ್ತದೆ. ಭದ್ರತಾ ಹಿತದೃಷ್ಟಿಯಿಂದ ಸದರಿ ಕಟ್ಟಡಗಳ ಮಧ್ಯಭಾಗದಲ್ಲಿ ಎಲ್.ಇ.ಡಿ. ಹೈ-ಮಾಸ್ಟ್ ಲೈಟ್ ಅಳವಡಿಸಲು ಅಂದಾಜು ಪಟ್ಟಿ ಸಲ್ಲಿಸುವಂತೆ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾಸನರವರನ್ನು ಕೋರಲಾಗಿದ್ದು, ಸದರಿಯವರು ಕೆಳಕಂಡಂತೆ ಅಂದಾಜು ಪಟ್ಟಿ ಸಲ್ಲಿಸಿರುವುದನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.</td></tr>
</table>

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

ನಿರ್ದೇಶಕರ ಕಛೇರಿ ಹಿಮ್ಸ್, ಹಾಸನ

<table>
<tr><th>ಅಜೆಂಡಾ ಕ್ರಮ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td>
<table>
<tr><th>ಕ್ರಮ ಸಂಖ್ಯೆ</th><th>ಕಾಮಗಾರಿ ವಿವರ</th><th>ಪ್ರಮಾಣ</th><th>ಅಂದಾಜು ವೆಚ್ಚ ರೂ.ಲಕ್ಷಗಳಲ್ಲಿ</th></tr>
<tr><td>1</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ಎಲ್.ಇ.ಡಿ. ಹೈ ಮಾಸ್ಟ್ ಲೈಟ್ ಅಳವಡಿಸುವುದು.</td><td>01</td><td>4.93</td></tr>
</table>
ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಂಸ್ಥೆಯ ಆವರಣದಲ್ಲಿ ಎಲ್.ಇ.ಡಿ. ಹೈ-ಮಾಸ್ಟ್ ಲೈಟ್ ಅಳವಡಿಸುವುದರಿಂದ ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುವ ವಿದ್ಯಾರ್ಥಿಗಳು, ಸಿಬ್ಬಂದಿವರ್ಗದವರು, ರೋಗಿಗಳು, ಮತ್ತು ಸಾರ್ವಜನಿಕರಿಗೆ ಅನುಕೂಲವಾಗುತ್ತದೆಂದು ಪರಿಗಣಿಸಿ, ಸದರಿ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡು ವೆಚ್ಚವನ್ನು ಸಂಸ್ಥೆಯ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.
</td></tr>
<tr><td>25</td><td>ಹಿಮ್ಸ್ ಸಂಸ್ಥೆಯ ಹೊಸ ಆಸ್ಪತ್ರೆಯ ಕಟ್ಟಡದ ಗೋಡೆಗಳಿಗೆ ಅಳವಡಿಸಿರುವ ಗ್ಲಾಸ್‌ಗಳು ಹಾಳಾಗಿರುವುದನ್ನು ಸರಿಪಡಿಸುವುದು ಮತ್ತು ಕಸ ಸಂಗ್ರಹಣಾ ಕೊಠಡಿಗೆ ರಸ್ತೆ ನಿರ್ಮಿಸುವ ಕಾಮಗಾರಿ ಕೈಗೊಳ್ಳುವ ಬಗ್ಗೆ.</td><td>
ಸಂಸ್ಥೆಯ ಹೊಸ ಆಸ್ಪತ್ರೆಯ ಕಟ್ಟಡದ ಗೋಡೆಗಳ ಕಿಟಕಿಗಳಿಗೆ ಅಳವಡಿಸಿರುವ ಕೆಲವು ಗ್ಲಾಸ್‌ಗಳು ಒಡೆದು ಹೋಗಿದ್ದು ಮಳೆ ಮತ್ತು ಗಾಳಿಯಿಂದ ರೋಗಿಗಳಿಗೆ ತೊಂದರೆಯಾಗಿರುತ್ತದೆ. ಒಡೆದುಹೋಗಿರುವ ಗ್ಲಾಸ್‌ಗಳನ್ನು ಸರಿಪಡಿಸಲು ಮತ್ತು ಆಸ್ಪತ್ರೆಯ ತ್ಯಾಜ್ಯಗಳನ್ನು ಸಂಗ್ರಹಣಾ ಕೊಠಡಿಗೆ ಸಾಗಿಸಲು ರಸ್ತೆ ಇಲ್ಲದಿರುವುದರಿಂದ ರಸ್ತೆ ನಿರ್ಮಿಸಿ ಕೊಡುವಂತೆ. ಸಹಾಯಕ ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪವಿಭಾಗ, ಹಾಸನ ರವರಿಗೆ ಕೋರಲಾಗಿ ಸದರಿ ಇಲಾಖೆಯವರು ಕೆಳಕಂಡಂತೆ ಸಲ್ಲಿಸಿರುವ ಅಂದಾಜು ಪಟ್ಟಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.
<table>
<tr><th>ಕ್ರಮ ಸಂಖ್ಯೆ</th><th>ಕಾಮಗಾರಿ ವಿವರ</th><th>ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ )</th></tr>
<tr><td>1</td><td>ಹಿಮ್ಸ್ ಸಂಸ್ಥೆಯ ಹೊಸ ಆಸ್ಪತ್ರೆಯ ಕಟ್ಟಡದ ಗೋಡೆಗಳಿಗೆ ಅಳವಡಿಸಿರುವ ಗ್ಲಾಸ್‌ಗಳು ಹಾಳಾಗಿರುವುದನ್ನು ಸರಿಪಡಿಸುವುದು ಮತ್ತು ಕಸ ಸಂಗ್ರಹಣಾ ಕೊಠಡಿಗೆ ರಸ್ತೆ ನಿರ್ಮಿಸುವ ಕಾಮಗಾರಿ ಕೈಗೊಳ್ಳುವ ಬಗ್ಗೆ</td><td>3.50</td></tr>
</table>
ಸದರಿ ಕಾಮಗಾರಿಗಳನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ ವಿಭಾಗ ಇವರಿಂದ ಕೈಗೊಳ್ಳಲು ಮತ್ತು ಅಂದಾಜು ಮೊತ್ತವನ್ನು ಯೂಜರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.
</td></tr>
<tr><td>26</td><td>ಹಿಮ್ಸ್ ಸಂಸ್ಥೆಯ ಹಳೆ ಆಸ್ಪತ್ರೆಯ ಕಟ್ಟಡದಲ್ಲಿ ಪ್ರಸೂತಿ ಮತ್ತು ಸ್ತ್ರೀ</td><td>ಸಂಸ್ಥೆಯ ಹಳೆ ಆಸ್ಪತ್ರೆಯ ಕಟ್ಟಡದಲ್ಲಿ ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗಕ್ಕೆ ವ್ಯವಸ್ಥಿತವಾದ ಕನಿಷ್ಠ 10 ಬೆಡ್ ಇರುವ ಐ.ಸಿ.ಯು ವ್ಯವಸ್ಥೆ ಮಾಡಿಸಿಕೊಡುವಂತೆ ಸಂಬಂಧಪಟ್ಟ ವಿಭಾಗದ ಮುಖ್ಯಸರು ಸಲ್ಲಿಸಿದ್ದ ಮನವಿ</td></tr>
</table>



ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

<table>
<tr><th>ಅಜೆಂಡಾ ಕ್ರಮ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td>ರೋಗ ವಿಭಾಗಕ್ಕೆ ವ್ಯವಸ್ಥಿತವಾದ ಐ.ಸಿ.ಯುಮಾಡಿಸಿ ಕೊಡುವುದು ಮತ್ತು ಹಳೆಯ ಎನ್.ಐ.ಸಿ.ಯು. ಕೊಠಡಿಯನ್ನು ಚೇತರಿಕೆ ಕೊಠಡಿ ಆಗಿ ಪರಿವರ್ತಿಸುವ ಕಾಮಗಾರಿ ಗಳನ್ನು ಕೈಗೊಳ್ಳುವ ಬಗ್ಗೆ.</td><td>ಪತ್ರದ ಮೇರೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ ವಿಭಾಗ, ಹಾಸನ ರವರಿಗೆ ಸದರಿ ಕಾಮಗಾರಿಗಳಿಗೆ ಅಂದಾಜು ಪಟ್ಟಿ ಸಲ್ಲಿಸುವಂತೆ ಕೋರಲಾಗಿದ್ದು, ಸದರಿಯವರು ಈ ಕೆಳಕಂಡಂತೆ ಸಲ್ಲಿಸಿದ್ದ ಅಂದಾಜು ಪಟ್ಟಿಯನ್ನು ಸಂಸ್ಥೆಯ ನಿರ್ದೇಶಕರು ಸಭೆ ಮುಂದೆ ಮಂಡಿಸಿದರು.
<table>
<tr><th>ಕ್ರಮ ಸಂಖ್ಯೆ</th><th>ಕಾಮಗಾರಿ ವಿವರ</th><th>ಅಂದಾಜು ವೆಚ್ಚ ರೂ.ಲಕ್ಷಗಳಲ್ಲಿ</th></tr>
<tr><td>1</td><td>ಹಿಮ್ಸ್ ಸಂಸ್ಥೆಯ ಹಳೆ ಆಸ್ಪತ್ರೆಯ ಕಟ್ಟಡದಲ್ಲಿ ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗಕ್ಕೆ ವ್ಯವಸ್ಥಿತವಾದ ಐ.ಸಿ.ಯು ಮಾಡಿಸಿ ಕೊಡುವುದು ಮತ್ತು ಹಳೆಯ ಎನ್.ಐ.ಸಿ.ಯು. ಕೊಠಡಿಯನ್ನು ಚೇತರಿಕೆ ಕೊಠಡಿ ಆಗಿ ಪರಿವರ್ತಿಸುವ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ.</td><td>25.00</td></tr>
</table>
<br>ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗದಲ್ಲಿ ದಾಖಲಾಗುವ ರೋಗಿಗಳಿಗೆ ಹೆಚ್ಚಿನ ಚಿಕಿತ್ಸೆಗೆ ಅಗತ್ಯವಿರುವ ಐ.ಸಿ.ಯು ಮತ್ತು ಚೇತರಿಕೆ ಕೊಠಡಿಯನ್ನು ನಿರ್ಮಿಸುವ ಕಾಮಗಾರಿಯ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ ರೋಗಿಗಳ ಚಿಕಿತ್ಸೆಯ ಹಿತದೃಷ್ಟಿಯಿಂದ ಸದರಿ ಕಾಮಗಾರಿಗಳು ಅತಿ ಅವಶ್ಯವೆಂದು ಪರಿಗಣಿಸಿ ಸದರಿ ಕಾಮಗಾರಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ ವಿಭಾಗ ಇವರಿಂದ ಕೈಗೊಂಡು ಕಾಮಗಾರಿ ವೆಚ್ಚವನ್ನು ಸಂಸ್ಥೆಯ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.
<br>ಮುಂದುವರೆದು ಪ್ರಸೂತಿ ಮತ್ತು ಸ್ತ್ರೀರೋಗ ಚಿಕಿತ್ಸಾ ವಿಭಾಗಕ್ಕೆ ಅವಶ್ಯಕವಿರುವ ಐ.ಸಿ.ಯು ಮತ್ತು ಚೇತರಿಕೆ ಕೊಠಡಿಯನ್ನು ಮೇಲ್ದರ್ಜೆಗೇರಿಸುತ್ತಿರುವುದರಿಂದ ರೋಗಿಗಳ ಚಿಕಿತ್ಸೆಗೆ 10 ಐ.ಸಿ.ಯು. ಕಾಟ್‌ಗಳು ಮತು 4 ಮಾನಿಟರ್‌ಗಳು ಅವಶ್ಯಕವಿದ್ದು ಅಂದಾಜು ವೆಚ್ಚ ಕೆಳಕಂಡಂತಿದ್ದು ಸದರಿ ಉಪಕರಣಗಳನ್ನು ನಿಯಮಾನುಸಾರ ಖರೀದಿಸಲು ಅನುಮತಿ ನೀಡುವಂತೆ ವೈದ್ಯಕೀಯ ಅಧೀಕ್ಷಕರು ಸಭೆಯಲ್ಲಿ ಪ್ರಸ್ತಾಪಿಸಿದರು.
<table>
<tr><th>ವಿವರ</th><th colspan="2">ಒಂದಕ್ಕೆ ಅಂದಾಜು ವೆಚ್ಚ</th><th>ಪರಿಮಾಣ</th><th>ಒಟ್ಟು</th></tr>
<tr><td>ICU Cot with Mattresses</td><td>1</td><td>50,000–00</td><td>10</td><td>5,00,000–00</td></tr>
<tr><td>ICU Monitor</td><td>1</td><td>80,000.00</td><td>4</td><td>3,20,000–00</td></tr>
<tr><td colspan="4">ಒಟ್ಟು</td><td>8,20,000–00</td></tr>
</table></td></tr>
</table>



ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಸದರಿ ವಿಷಯದ ಬಗ್ಗೆ ಚರ್ಚಿಸಿ ಪ್ರಸೂತಿ ಮತ್ತು ಸ್ತ್ರೀ ರೋಗ ಚಿಕಿತ್ಸಾ ವಿಭಾಗದ ಐ.ಸಿ.ಯು ಘಟಕವನ್ನು ಮೇಲ್ದರ್ಜೇಗೇರಿಸುತ್ತಿರುವುದರಿಂದ ಅಗತ್ಯವಿರುವ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ನಿಯಮಾನುಸಾರ ಖರೀದಿಸಿ ಸದರಿ ವೆಚ್ಚವನ್ನು ಯೂಸರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |

ಆರ್ಥಿಕ ಅಧಿಕಾರಿಗಳು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ,
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
ಹಾಗೂ ಸದಸ್ಯರು, ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ-573 201

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬಹುಮಹಡಿಗಳ ಕಟ್ಟಡ,
ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.